20 ಅಕ್ಟೋಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 220 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಪರ್ತ್‌ನಲ್ಲಿ ಭಾನುವಾರ ಆಸ್ಟ್ರೇಲಿಯಾ ವಿರುದ್ಧ ನಡೆದ ಮೊದಲ ಪಂದ್ಯದಲ್ಲಿ 38 ರನ್ ಗಳಿಸಿದ ಭಾರತ ತಂಡದ ಕೆ.ಎಲ್.ರಾಹುಲ್... ಆಸ್ಟ್ರೇಲಿಯಾಕ್ಕೆ 7 ವಿಕೆಟ್ ಜಯ...



ಹಾಯಾದ ಬದುಕಿನ ಗುಟ್ಟು : ಕತ್ತೆ ಬಾಲ, ಕುದುರೆ ಜುಟ್ಟು...! » 2



ಆಲೂರು : ಗಣವೇಷಧಾರಿಗಳ ಶಿಸ್ತುಬದ್ಧ ಹೆಜ್ಜೆ » 3



ಅರಕಲಗೂಡು ತಾಲ್ಲೂಕಿನಾದ್ಯಂತ ಅಕಾಲಿಕ ಮಳೆ ತಂದ ಸಂಕಷ್ಟ » 4

# ಜಿಲ್ಲಾಡಳಿತ ವಿರುದ್ಧ ಜೆಡಿಎಸ್ ಭಾರೀ ಪ್ರತಿಭಟನೆ

## ಮಹಾನಗರ ಪಾಲಿಕೆ ಕಚೇರಿ ಎದುರು ಹೈ ಡ್ರಾಮಾ | ಪರಿಸ್ಥಿತಿ ಕೈ ಮೀರುತ್ತಿದ್ದಂತೆ ಡಿಸಿ ಸಂಧಾನ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನಕ್ಕೆ ಬಂದಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಜಿಲ್ಲಾಡಳಿತ ಗೌರವ ನೀಡಿಲ್ಲ ಹಾಗು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಕಡೆಗಣಿಸಲಾಗಿದೆಯೆಂದು ಆರೋಪಿಸಿ ಜೆಡಿಎಸ್ ಕಾರ್ಯಕರ್ತರು ಮಹಾನಗರ ಪಾಲಿಕೆ ಎದುರಿನ ಮುಖ್ಯ ದ್ವಾರದ ಮುಂಭಾಗ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ತೀವ್ರ ಸ್ವರೂಪ ಪಡೆದು ಬಿಗುವಿನ ವಾತಾವರಣ ಸೃಷ್ಟಿಸಿತ್ತು.

ಹಾಸನಾಂಬ ಜಾತ್ರೆಯನ್ನು ಕಾಂಗ್ರೆಸ್ ಉತ್ಸವವಾಗಿಸಿಕೊಂಡಿದ್ದಾರೆಂದು ಆಕ್ರೋಶ ವ್ಯಕ್ತ ಪಡಿಸಿದ ಜೆಡಿಎಸ್ ಹಾಲಿ ಹಾಗು ಮಾಜಿ ಶಾಸಕರು ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ಸ್ಪಷ್ಟನೆ ನೀಡುವ ವರೆಗೆ ಪ್ರತಿಭಟನೆ ವಾಪಾಸ್ ಪಡೆಯುವುದಿಲ್ಲವೆಂದು ಪಟ್ಟು ಹಿಡಿದರು. ಆರಂಭದಲ್ಲಿ ಪ್ರತಿಭಟನೆಗೆ ತಲೆ ಕೆಡಿಸಿಕೊಳ್ಳದ ಜಿಲ್ಲಾಧಿಕಾರಿ ಸುಮಾರು ಮೂರು ಗಂಟೆಗಳ ಬಳಿಕ ಪರಿಸ್ಥಿತಿಯ ಗಂಭೀರತೆ ಅರಿತು ದೌಡಾಯಿಸಿದರು. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡುವುದರೊಂದಿಗೆ ಪರಿಸ್ಥಿತಿ ನಿಯಂತ್ರಿಸಿದರು. ಜಿಲ್ಲಾಧಿಕಾರಿ ಆಗಮನಕ್ಕೂ ಮೊದಲು ಪ್ರತಿಭಟನಾಕಾರರ ಮನವೊಲಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ದೇವಾಲಯ ಆಡಳಿತಾಧಿಕಾರಿ ಮಾರುತಿ ಬಂದರಾದರೂ ಜಿಲ್ಲಾಧಿ ಕಾರಿ ಬರುವವರೆಗೆ ಸ್ಥಳದಿಂದ ಕದಲುವುದಿಲ್ಲವೆಂದು ಶಾಸಕ ಹೆಚ್.ಪಿ.ಸ್ವರೂಪ್ ಆಕ್ರೋಶ ಭರಿತರಾಗಿ ಹೇಳಿದ್ದರಿಂದ ಅಧಿಕಾರಿಗಳು ಬಂದ ದಾರಿಗೆ ಸುಂಕವಿಲ್ಲದಂತೆ ವಾಪಾಸ್ಸಾದರು.

ಅರಕಲಗೂಡು ಶಾಸಕ ಎ.ಮಂಜು ಅವರು ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರು ಎಂಬ ಸಾಮಾನ್ಯ ಜ್ಞಾನ ಅಧಿಕಾರಿಗಳಿಗೆ ಇಲ್ಲ. ಅವರು ಮುಖ್ಯಮಂತ್ರಿ ಆಗಿದ್ದ ವೇಳೆ ದೇವಸ್ಥಾನ ಅಭಿವೃದ್ಧಿಗೆ 2 ಕೋಟಿ ರೂ. ಅನುದಾನ ನೀಡಿದ್ದರು. ಸ್ಥಳೀಯ ಶಾಸಕರನ್ನು ಕಡೆಗಣಿಸಿ ಕಾರ್ಯಕ್ರಮ ಮಾಡುವ ಔಚಿತ್ಯ ಇರಲಿಲ್ಲ. ಜಿಲ್ಲಾಧಿಕಾರಿ ಅವರೇ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು. ಜನಪ್ರತಿನಿಧಿ ಕರೆ ಮಾಡಿದರೆ ಸ್ವೀಕರಿಸುವ ಸೌಜನ್ಯ ಅವರಿಗೆ ಇಲ್ಲ. ಜಿಲ್ಲಾಧಿಕಾರಿಗೆ ಹಾಸನಾಂಬ ಜಾತ್ರೆಯೊಂದೇ ಕೆಲಸವಲ್ಲ. ಹಳ್ಳಿಗಳಲ್ಲಿ ಜನರು ಕುಡಿಯಲು ನೀರಿಲ್ಲದೆ ಪರದಾಡುತ್ತಿದ್ದಾರೆ. ಅದರ ಬಗ್ಗೆ ಗಮನ ಹರಿಸುವ ಬದಲು ಬೇರೆ ಏನೇನೋ ಮಾಡಿದರೆ ಏನರ್ಥವೆಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಜಿಲ್ಲಾಧಿಕಾರಿ ಹಾಸನಕ್ಕೆ ಈಗ ಬಂದಿದ್ದಾರೆ. ದೇವಾಲಯ ಕಟ್ಟಿ ಬೆಳೆಸಿದವರು ಇಲ್ಲಿನ ಸ್ಥಳೀಯರು. ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಬಂದಿದ್ದಾಗ ಸನ್ಮಾನ ಮಾಡದೇ ಇರಲು ಕಾರಣ ತಿಳಿಯಲು 12 ಸಲ ಕರೆ ಮಾಡಿದರೂ ಸ್ವೀಕರಿಸಿಲ್ಲ. ಇಂತಹ ಮನೋಭಾವನೆಯನ್ನು ಯಾವ ಕಾರಣಕ್ಕೂ ಸಹಿಸುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸರ್ವಾಧಿಕಾರಿ ಧೋರಣೆಗೆ ಕಡಿವಾಣ ಹಾಕಬೇಕು. ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ವಸ್ತು ಪ್ರದರ್ಶನ ಏರ್ಪಡಿಸಿ ಹಸಿರು ಕ್ರೀಡಾಂಗಣವನ್ನು ಹಾಳು ಮಾಡಿದ್ದಾರೆ. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷನಾಗಿರುವ ನನ್ನ ಗಮನಕ್ಕೂ ತಂದಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ ಸಮಾರಂಭಕ್ಕೆ ಅಧ್ಯಕ್ಷತೆ ವಹಿಸಬೇಕಿದ್ದ ನನ್ನನ್ನು ಕರೆದಿಲ್ಲ. ಕಾಂಗ್ರೆಸ್ ಪರಾಜಿತ ಅಭ್ಯರ್ಥಿಗಳೊಂದಿಗೆ ನೃತ್ಯ ಮಾಡಿದ್ದಾರೆ. ಜಿಲ್ಲಾಡಳಿತ ಕಾಂಗ್ರೆಸ್ ವಕ್ತಾರ ಸ್ಥಾನದಲ್ಲಿ ನಿಂತು ಕೆಲಸ ಮಾಡುತ್ತಿದೆ. ಕಳೆದ ಬಾರಿಯೂ ಹಾಸನಾಂಬ » ನಾಲ್ಕನೇ ಪುಟದಲ್ಲಿ






### ಮುಖ್ಯಾಂಶಗಳು

- ಕಾಂಗ್ರೆಸ್ ಉತ್ಸವವಾಗಿದೆಯೆಂದು ಜೆಡಿಎಸ್ ಆರೋಪ
- ಜಿಲ್ಲಾಧಿಕಾರಿ ಸರ್ವಾಧಿಕಾರಿ ಧೋರಣೆ ಸಹಿಸುವುದಿಲ್ಲ
- ಬ್ಯಾರಿಕೇಡ್ ತಳ್ಳಾಟ, ತಾಳ್ಮೆ ಕಳೆದುಕೊಂಡ ಪೊಲೀಸರು
- ಪ್ರಸಾದ ವಿತರಿಸಿ ವಿವಾದ ತಣ್ಣಗಾಗಿಸಿದ ಡಿಸಿ ಲತಾಕುಮಾರಿ

### ಸಚಿವರ ಮಾತಿಗೆ ಸಿಗದ ಮನ್ನಣೆ

ದೇವಾಲಯದಿಂದ ಹೊರಡುವ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರನ್ನು ಕರೆದು ಸ್ಥಳಕ್ಕೆ ತೆರಳಿ ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಎಂದು ಸಲಹೆ ನೀಡಿ ತೆರಳಿದರು. ಸಚಿವರು ಕಾರು ಏರಿ ಹೋಗುತ್ತಿದ್ದಂತೆ ಜಿಲ್ಲಾಧಿಕಾರಿಯು ತಮ್ಮ ಕಾರಿನಲ್ಲಿ ಕಚೇರಿಯತ್ತ ತೆರಳಿದರು. ಮತ್ತೊಂದೆಡೆ ಪ್ರತಿಭಟನಾಕಾರರು ಸಹ ಐದು ನಿಮಿಷ ಭೇಟಿ ನೀಡಿದ್ದರೆ ಇಷ್ಟೊಂದು ರಾದ್ಧಾಂತ ಆಗುತ್ತಿರಲಿಲ್ಲವೆಂದರು.

### ಹೆಚ್‌ಡಿಕೆ ಜೊತೆ ದೂರವಾಣಿ ಮಾತು: ಪ್ರತಿಭಟನೆ ಸುಖಾಂತ್ಯ



ಸತತ ಮೂರು ಗಂಟೆಗಳ ಪ್ರತಿಭಟನೆ ಬಳಿಕ ಕೊನೆಗೂ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಸ್ಥಳಕ್ಕೆ ಬಂದು ಶಾಸಕರೊಂದಿಗೆ ಮಾತುಕತೆ ನಡೆಸುವ ಮೂಲಕ ಪ್ರಕರಣಕ್ಕೆ ಸುಖಾಂತ್ಯ ಹಾಡಿದರು. ಎ.ಮಂಜು ಅವರು ಮಾತನಾಡಿ, ದರ್ಶನಕ್ಕೆ ಬಂದಿದ್ದ ಕೇಂದ್ರ ಸಚಿವರಿಗೆ ಅಗೌರವ ತೋರಿರುವುದು, ಕ್ಷೇತ್ರ ಶಾಸಕರ ಕಡೆಗಣನೆ ಹಾಗು ಸರ್ಕಾರಿ ವಿಜ್ಞಾನ ಕಾಲೇಜು ಮೈದಾನ ಹಾಳು ಮಾಡಿರುವುದಕ್ಕೆ ಸ್ಪಷ್ಟನೆ ಕೋರಿದರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರು ನಾಡು ಕಂಡ ಶ್ರೇಷ್ಠ ರಾಜಕಾರಣಿ. ಅವರಿಗೆ ಅಗೌರವ ತೋರುವ ಸಣ್ಣ ಬುದ್ಧಿ ನನಗಿಲ್ಲ. ಜಾತ್ರಾ ಮಹೋತ್ಸವಕ್ಕೆ ಆಹ್ವಾನಿಸಲು ಮನೆಗೆ ಬರುತ್ತೇನೆಂದು ಕರೆ ಮಾಡಿದಾಗ ಖಂಡಿತ ಬರುತ್ತೇ ನೆಂದು ಹೇಳಿದ್ದರು. ಹಾಸನಾಂಬ ದರ್ಶನ ಪಡೆದ ಮಾರನೇ ದಿನ ಅವರೇ ಕರೆ ಮಾಡಿ ಜಿಲ್ಲಾಡಳಿತ ಕೈಗೊಂಡಿರುವ ವ್ಯವಸ್ಥೆ ಕುರಿತು ಮೆಚ್ಚುಗೆ ಸೂಚಿಸಿದ್ದಾರೆ. ಆ ದಿನ ಅವರಿಗೆ ಶಿಷ್ಟಾಚಾರ ಪ್ರಕಾರ ಸನ್ಮಾನಿಸದೆ ಇರುವುದು ನಮ್ಮಿಂದ ಆಗಿರುವ ಲೋಪ. ಅವತ್ತು ಲಕ್ಷಾಂತರ ಭಕ್ತರು ಬಂದಿದ್ದರಿಂದ ನಾನು ಅಲ್ಲಿರಲು ಸಾಧ್ಯವಾಗಲಿಲ್ಲ. ಸಿದ್ದೇಶ್ವಸ್ವಾಮಿ ದರ್ಶನದ ಬಳಿಕ ಜಿಲ್ಲಾಡಳಿತದಿಂದ ಸನ್ಮಾನಿಸುವುದು ವಾಡಿಕೆ. ಅದಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿತ್ತಾದರೂ ಆಗ ಸ್ಥಳದಲ್ಲಿದ್ದವರು ಮಾಡಿಲ್ಲವೆಂದು ಸ್ಪಷ್ಟಪಡಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಆಹ್ವಾನಿಸದೆ ಇರುವ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಯಾವ ಕಾರಣಕ್ಕಾಗಿ ಈ ಲೋಪವಾಗಿದೆ ಎಂಬ ಮಾಹಿತಿ ಗೊತ್ತಿಲ್ಲ. ಇನ್ನು ಸರ್ಕಾರಿ ವಿಜ್ಞಾನ ಕಾಲೇಜು ಮೈದಾನ ಅಭಿವೃದ್ಧಿಪಡಿಸಬೇಕಿದ್ದು ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದರು. ಇದೇ ವೇಳೆ ಶಾಸಕ ಎ.ಮಂಜು ಅವರು ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೂರವಾಣಿ ಕರೆ ಮಾಡಿ ಜಿಲ್ಲಾಧಿಕಾರಿ ಅವರಿಂದ ಮಾತನಾಡಿಸಿದರು. ಶಾಸಕರು ಹಾಗು ಜೆಡಿಎಸ್ ಕಾರ್ಯಕರ್ತರಿಗೆ ದೇವರ ಪ್ರಸಾದ ವಿತರಿಸುವ ಮೂಲಕ ತಾರಕಕ್ಕೇರಿದ್ದ ವಿವಾದವನ್ನು ಜಿಲ್ಲಾಧಿಕಾರಿ ಜಾಣ ನಡೆಯಿಂದ ತಣ್ಣಗಾಗಿಸಿದರು.

# ಅತಿವೃಷ್ಟಿ: ರಾಜ್ಯಕ್ಕೆ 384 ಕೋಟಿ ರೂ. ಪರಿಹಾರ

• ಪ್ರಜೋದಯ ವರದಿ

**ನವದೆಹಲಿ:** ರಾಜ್ಯದಲ್ಲಿ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿಗೆ 384 ಕೋಟಿ ರೂ. ಬಿಡುಗಡೆ ಮಾಡಲು ಕೇಂದ್ರ ಗೃಹ ಸಚಿವಾಲಯ ಅನುಮೋದನೆ ನೀಡಿದೆ.

ಮಹಾರಾಷ್ಟ್ರ ಹಾಗು ಕರ್ನಾಟಕಕ್ಕೆ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿಗೆ ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಅಡಿಯಲ್ಲಿ ಒಟ್ಟು 1,950 ಕೋಟಿ ರೂ. ಮುಂಗಡವಾಗಿ ಬಿಡುಗಡೆ ಮಾಡಲು ಗೃಹ ಸಚಿವ ಅಮಿತ್ ಶಾ ಅನುಮತಿ ನೀಡಿದ್ದಾರೆಂದು ಪ್ರಕಟಣೆ ತಿಳಿಸಿದೆ. ನೈಋತ್ಯ ಮುಂಗಾರಿನಲ್ಲಿ ಅತಿವೃಷ್ಟಿ ಹಾಗು ಪ್ರವಾಹದಿಂದ ತೊಂದರೆಗೊಳಗಾದ ಜನರಿಗೆ ತಕ್ಷಣ ಪರಿಹಾರ ನೀಡುವ ಸಲುವಾಗಿ ಕರ್ನಾಟಕಕ್ಕೆ 384.40 ಕೋಟಿ ರೂ. ಮತ್ತು ಮಹಾರಾಷ್ಟ್ರಕ್ಕೆ 1,566.40 ಕೋಟಿ ರೂ. ನೀಡಲು ಒಪ್ಪಿಗೆ ನೀಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಪ್ರವಾಹ, ಭೂಕುಸಿತ, ಮೇಘ ಸ್ಫೋಟದಿಂದ ತೊಂದರೆಗೊಳಗಾದ ಜನರಿಗೆ ಎಲ್ಲಾ ರೀತಿಯ ಸಹಾಯ ನೀಡಲು ಕೇಂದ್ರ ಸಂಪೂರ್ಣ ಬದ್ಧವಾಗಿದೆಯೆಂದು ಪ್ರಕಟಣೆ ತಿಳಿಸಿದೆ.

ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಎಸ್‌ಡಿಆರ್‌ಎಫ್ ಅಡಿಯಲ್ಲಿ 27 ರಾಜ್ಯಗಳಿಗೆ 13,603.20 ಕೋಟಿ ರೂ. ಮತ್ತು ಎನ್‌ಡಿಆರ್‌ಎಫ್ ಅಡಿಯಲ್ಲಿ 15 ರಾಜ್ಯಗಳಿಗೆ 2,189.28 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಅಲ್ಲದೆ 21 ರಾಜ್ಯಗಳಿಗೆ ಎಸ್‌ಡಿಎಂಎಫ್ ನಿಧಿಯಿಂದ 4,571.30 ಕೋಟಿ ರೂ. ಮತ್ತು ಒಂಬತ್ತು ರಾಜ್ಯಗಳಿಗೆ ಎನ್‌ಡಿಎಂಎಫ್ ಅಡಿಯಿಂದ 372.09 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

# ನೋಡುಗರ ಆಕರ್ಷಿಸಿದ ಶ್ವಾನ ಪ್ರದರ್ಶನ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಶ್ವಾನ ಪ್ರದರ್ಶನದಲ್ಲಿ ಹಲವು ತಳಿಯ 175 ಶ್ವಾನಗಳು ಭಾಗ ವಹಿಸಿ, ಪ್ರದರ್ಶನ ನೀಡುವ ಮೂಲಕ ಪ್ರೇಕ್ಷಕರನ್ನು ರಂಜಿಸಿ ಬಹುಮಾನ ಗೆದ್ದುಕೊಂಡವು.

ಭಾನುವಾರ ನಗರದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ ಶ್ವಾನ ಪ್ರದರ್ಶನದಲ್ಲಿ ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ್ದ ಶ್ವಾನಗಳು ತಮ್ಮ ನಡೆ, ಆಟೋಟ, ಮೈಮಾಟ, ಹಾವಭಾವದಿಂದಲೇ ನೋಡುಗರನ್ನು ಆಕರ್ಷಿಸಿದವು.

ಬೆಲ್ಜಿಂ ಮೆಲೋಲಿಸ್, ಪೋರ್ಚುಗಲ್ ದೇಶ ಶ್ವಾನ ಪ್ರಮುಖ ಆಕರ್ಷಣೆಯವಾಗಿದ್ದವು. ಉಳಿದಂತೆ ಜರ್ಮನ್ ಶಫರ್ಡ್, ಮುದೋಳ್, ಗ್ರೇಟ್‌ಡೇನ್, ಪಿಟ್‌ಬುಲ್, ಡಾಬರ್ ಮನ್, ರಾಟ್‌ವೀಲರ್, ಸೇಂಟ್ ಬರ್ನಾಡ್, ಗೋಲ್ಡನ್ ರಿಟ್ರಿವರ್ ಸೇರಿ ಒಟ್ಟು 31 ತಳಿಯ ಶ್ವಾನಗಳು ಭಾಗವಹಿಸಿದ್ದವು.



### ಪ್ರೀತಮ್‌ಗೌಡ ಆರೋಪಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ತಿರುಗೇಟು

# ಹೇಗೆ ವರ್ತಿಸಬೇಕೆಂದು ಹೇಳಿಸಿಕೊಳ್ಳುವ ಅಗತ್ಯ ನನಗಿಲ್ಲ

• ಪ್ರಜೋದಯ ವರದಿ

**ಹಾಸನ:** ನಾನು ಅಧಿಕಾರಿಗಳ ಜೊತೆ ಯಾವ ರೀತಿ ವರ್ತಿಸಬೇಕು ಎನ್ನುವುದು ಶಾಸಕನಾಗಿ ನನಗೆ ಗೊತ್ತಿದೆ. ಬೇರೆಯವರಿಂದ ಹೇಳಿಸಿಕೊಳ್ಳುವಂತ ಹದ್ದು ಏನಿಲ್ಲ. ನಮ್ಮ ತಂದೆ ನಾಲ್ಕು ಬಾರಿ ಶಾಸಕರಾಗಿದ್ದು, ಗುರು, ಹಿರಿಯರು ಯಾರ ಜೊತೆ ಹೇಗೆ ವರ್ತಿಸಬೇಕೆಂಬ ಸುಸಂಸ್ಕೃತಿ ಕಲಿಸಿಕೊಟ್ಟಿದ್ದಾರೆ ಎಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಪ್ರೀತಮ್ ಜೆ.ಗೌಡ ಅವರಿಗೆ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಪ್ರೀತಮ್ ಜೆ.ಗೌಡ ಅವರ ಬಗ್ಗೆ ಚರ್ಚೆ ಮಾಡಲ್ಲ, ಅವರು ಮೊದಲು ಯಾವ ಪಕ್ಷದಲ್ಲಿ ಇದ್ದಾರೆ ಬಹಿರಂಗಪಡಿಸಲಿ. ನಾನು, ನನ್ನ ಕುಟುಂಬ ವಿದೇಶ ಪ್ರವಾಸಕ್ಕೆ ಹೋಗುವುದು ವೈಯುಕ್ತಿಕ. ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಕರೆದಿರುವ ಪ್ರತಿಯೊಂದು ಸಭೆಯಲ್ಲೂ ಭಾಗವಹಿಸಿ, ನನ್ನದೆಯಾದ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ. ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೇನೆ ಎಂದರು.

ಆತ್ಮಗೌರವಕ್ಕೆ ಧಕ್ಕೆಯಾದಾಗ, ಕುಮಾರಣ್ಣ ಅವರಿಗೆ ಅಗೌರವ ತೋರಿದಾಗ ಮಾತನಾಡಲೇ ಬೇಕಾಗುತ್ತದೆ. ಅಧಿಕಾರಿಗಳಿಗೆ ಸನ್ಮಾನ ಮಾಡಿ ಎಂದು ನಾನು ಹೇಳಲು ಆಗುವುದಿಲ್ಲ. ಕೇಂದ್ರ ಸಚಿವರು ಬರುವ ಎರಡು ದಿನ ಹಿಂದೆ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗೆ ಹೇಳಿದ್ದೇನೆ. ಶಿಷ್ಟಾಚಾರದಂತೆ ಬನ್ನಿ ಎಂದರು, ಅದನ್ನು ಕುಮಾರಸ್ವಾಮಿ ಅವರಿಗೂ ಹೇಳಿದೆ. ಅವರು ಜಿಲ್ಲಾಡಳಿತದ ವ್ಯವಸ್ಥೆ ಮಾಡಿರುವಂತೆ ಹೋಗೋಣ ಎಂದರು. ಸರ್ಕಾರ ಕುಮಾರಸ್ವಾಮಿ ಅವರನ್ನು ಯಾವ ರೀತಿ ನಡೆಸಿಕೊಳ್ಳಬೇಕಿತ್ತು ಆ ರೀತಿ ನಡೆಸಿಕೊಳ್ಳಲಿಲ್ಲ. ಅದಕ್ಕೆ ವಿರೋಧ ಮಾಡಿದೆವು ಅಷ್ಟೇ ಎಂದರು.

ನಾನು ಹೇಳಿ ಸನ್ಮಾನ ಮಾಡಿಸುವುದಲ್ಲ, ಗೌರವಯುತವಾಗಿ ಸನ್ಮಾನ ಮಾಡಬೇಕಿತ್ತು. ಈಗೀನ ಸರ್ಕಾರ ಹೇಳಿದಂತೆ ಅಧಿಕಾರಿಗಳು ನಡೆದುಕೊಂಡಿದ್ದಾರೆ. ನಾನು ನನ್ನ ಇತಿಮಿತಿಯಲ್ಲಿ ಅಧಿಕಾರಿಗಳಿಗೆ ಹೇಗೆ ಹೇಳಬೇಕು ಹೇಳಿದ್ದೇನೆ. ನಾನು ಹೇಳಿದ ಕೆಲಸಗಳನ್ನು ಅಧಿಕಾರಿಗಳು ಮಾಡಿದ್ದಾರೆ. ನನ್ನ ವಿಚಾರದಲ್ಲಿ ಯಾರು ಬೆಟ್ಟು ಮಾಡಿ ತೋರಿಸುವುದು ಏನು ಇಲ್ಲ ಎಂದು ವಾಗ್ದಾಳಿ ನಡೆದಿಸಿದರು.

ನಾನು ಸಂಜೀವಿನಿ ಸಹಕಾರಿ ಆಸ್ಪತ್ರೆ ಅಧ್ಯಕ್ಷ, ಅದಕ್ಕಾಗಿ ಕೆ.ಎನ್. ರಾಜಣ್ಣ ಅವರ ಬಳಿ ಹೋಗಿದ್ದೆ. ನಾನು ಶಾಸಕ ಎಲ್ಲಾ ಪಕ್ಷದ ಶಾಸಕರು ನನಗೆ ಸ್ನೇಹಿತರು. ನಾನು ಕೇಳುವ ಪ್ರಶ್ನೆಗೆ ಅವರು ಉತ್ತರ ಕೊಡಲು ಆಗಲ್ಲ, ಲೋಕಸಭೆ ಚುನಾವಣೆಯಲ್ಲಿ ಯಾರ » ನಾಲ್ಕನೇ ಪುಟದಲ್ಲಿ



### ಅಧಿಕಾರಿಗಳ ಮೇಲೆ ದರ್ಪ ಮಾಡಲ್ಲ

ನನಗೆ ಗೊತ್ತಿದೆ ಯಾವ ರೀತಿ ಕೆಲಸ ಮಾಡಬೇಕು, ಯಾವ ರೀತಿ ಗೌರವ ಕೊಡಬೇಕು ಎಂದು. ಅಧಿಕಾರ ಇದೆ ಎಂದು ಅಧಿಕಾರಿಗಳ ಮೇಲೆ ಯಾವತ್ತು ದರ್ಪ ಮಾಡಲು ಹೋಗಿಲ್ಲ. ನಮ್ಮ ಕುಟುಂಬ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ. ಅವರ ರೀತಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಎಷ್ಟು ಗೋಮಾಳ ಜಾಗ, ಸರ್ಕಾರಿ ಜಾಗದಲ್ಲಿ ಲೇಔಟ್ ಮಾಡಿದ್ದಾರೆ. ಆಕಾಶವಾಣಿ ಪಕ್ಕದ ದೇವಸ್ಥಾನದ ವಿಚಾರದಲ್ಲಿ ಹೇಳಲು ಹೋದರೆ ಬಹಳಷ್ಟಿದೆ. ಈಗ ರಾಜಕೀಯ ಮಾತನಾಡುವುದು ಬೇಡ. ದೇವಸ್ಥಾನ ವಿಚಾರ, ದೇವರಿಗಾಗಿ ಕೆಲಸ ಮಾಡೋಣ ಎಂದು ತಿರುಗೇಟು ನೀಡಿದರು.

# ದಶದಿನದ ದರ್ಶನೋತ್ಸವ ಭಕ್ತರಿಗೆ ಸುಗಮ

## ಸರಾಗವಾಗಿ ಸಾಗಿದ ಧರ್ಮ ದರ್ಶನ ಸಾಲು | ಗಣ್ಯರು, ಚಲನಚಿತ್ರ ನಟರ ಆಗಮನ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನೋತ್ಸವದ ಹತ್ತನೇ ದಿನವಾದ ಭಾನುವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರೂ ಜನರು ಸಗಮವಾಗಿ ಕಡಿಮೆ ಅವಧಿಯಲ್ಲೇ ದೇವಿಯನ್ನು ಕಣ್ತುಂಬಿಕೊಂಡರು.

ರಜೆ ದಿನವಾಗಿದ್ದರಿಂದ ಭಾರೀ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇತ್ತು. ಆದರೆ, ಶನಿವಾರ ರಾತ್ರಿಯಿಂದ ಭಾನುವಾರ ಮುಂಜಾನೆವರೆಗೂ ಧಾರಾಕಾರವಾಗಿ ಮಳೆ ಸುರಿದಿದ್ದರಿಂದ ಭಕ್ತರ ದಂಡು ಕೊಂಚ ಕಡಿಮೆಯಾಗಿತ್ತು. 1 ಸಾವಿರ ರೂ., 300 ರೂ. ವಿಶೇಷ ದರ್ಶನದ ಸಾಲುಗಳಲ್ಲಿ ಆಗಮಿಸಿದ ಭಕ್ತರು ಸುಲಭವಾಗಿ ದರ್ಶನ ಪಡೆದುಕೊಂಡರು. ಧರ್ಮ ದರ್ಶನದ ಸಾಲುಗಳಲ್ಲಿ ಕಾದು ನಿಲ್ಲುವ ಸಮಯ 9 ಗಂಟೆಯಿಂದ 4 ಗಂಟೆಗೆ ಇಳಿದಿದ್ದರಿಂದ ಹೆಚ್ಚು ಸಮಯ ಕಾಯದೆ ಸುಗಮವಾಗಿ ದೇವಿ ದರ್ಶನ ಪಡೆದುಕೊಂಡರು.

ಕಳೆದ ಹತ್ತು ದಿನದ ಅವಧಿಯಲ್ಲಿ ಭಾನುವಾರ ಮುಂಜಾನೆವರೆಗೂ 19 ಲಕ್ಷಕ್ಕೂ ಹೆಚ್ಚಿನ ಭಕ್ತರು ದರ್ಶನ ಪಡೆದುಕೊಂಡಿದ್ದಾರೆ. ನರಕಚತುರ್ದಶಿ ಪ್ರಯುಕ್ತ ದೇವಿಗೆ ವಿಶೇಷ ಪೂಜೆ ಸಲ್ಲಿಸಬೇಕಿದ್ದರಿಂದ ಭಾನುವಾರ ರಾತ್ರಿ 12 ಗಂಟೆಗೆ ದೇಗುಲದ ಬಾಗಿಲು ಮುಚ್ಚಲಾಯಿತು. ಸೋಮವಾರ ಮುಂಜಾನೆ 5 ಗಂಟೆಯಿಂದ ಪುನಃ ದರ್ಶನ ಆರಂಭಗೊಳ್ಳಲಿದೆ.

ಲೋಕಾಯುಕ್ತ ಬಿ.ಎಸ್.ಪಾಟೀಲ್, ಮಾಜಿ ಸಚಿವೆ ಚಿತ್ರನಟಿ ಉಮಾಶ್ರೀ, ಮದ್ದೂರು ಶಾಸಕ ಉದಯ್‌ಗೌಡ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪುತ್ರಿ ಅನಸೂಯ, ಚಲನಚಿತ್ರನಟರಾದ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಪತ್ನಿ ಗೀತಾ ಶಿವರಾಜ್ ಕುಮಾರ್, ರಿಷಭ್ ಶೆಟ್ಟಿ, ಪತ್ನಿ ಪ್ರಗತಿ ಶೆಟ್ಟಿ ಅವರು ಸ್ನೇಹಿತರ ಜೊತೆ ಆಗಮಿಸಿ ದೇವಿ ದರ್ಶನ ಪಡೆದರು.

ಶುಕ್ರವಾರ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ಅಂದು ಸಂಜೆಯೇ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು, ಮೂರು ದಿನಗಳಿಂದ ಪರಿಸ್ಥಿತಿಯನ್ನು ತಹಬದಿಗೆ ತಂದು ಭಕ್ತರ ಸುಮಗ ದರ್ಶನಕ್ಕೆ ಅಗತ್ಯ ಕ್ರಮ ಕೈಗೊಂಡು, ಅಧಿಕಾರಿಗಳಿಗೆ ಅಗತ್ಯ ಸಲಹೆ- ಸೂಚನೆಗಳನ್ನು ನೀಡಿ ಭಾನುವಾರ ಮಧ್ಯಾಹ್ನ ಮರಳಿದರು. » ನಾಲ್ಕನೇ ಪುಟದಲ್ಲಿ





### ಸಿದ್ದೇಶ್ವರಸ್ವಾಮಿ ಪಲ್ಲಕ್ಕಿ ಉತ್ಸವ

ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಆರಂಭ ಗೊಂಡಿವೆ. ಭಾನುವಾರ ಮಧ್ಯಾಹ್ನ ಸಿದ್ದೇಶ್ವರಸ್ವಾಮಿ ಹಾಗು ವೀರಭದ್ರೇಶ್ವರಸ್ವಾಮಿ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಜರುಗಿತು. ರಾತ್ರಿ ದೇವಿಗೆರೆಯಲ್ಲಿ ತೆಪ್ಪೋತ್ಸವ ನೆರವೇರಿತು. ಪಲ್ಲಕ್ಕಿ ಉತ್ಸವದಲ್ಲಿ ನಂದಿಧ್ವಜ ಕುಣಿತ, ವೀರಗಾಸೆ, ಛತ್ರಿಚಾಮರಗಳು ಗಮನ ಸೆಳೆದವು.

# ಕಾನೂನು ಪಾಲಿಸದ ವರಟು ವಾದಕ್ಕೆ ಬೆಲೆ ಇಲ್ಲ

## ಆರ್‌ಎಸ್‌ಎಸ್ ನಿಷೇಧಿಸುತ್ತೇವೆಂದು ಹೇಳಿಲ್ಲ: ನರೇಂದ್ರಸ್ವಾಮಿ

• ಪ್ರಜೋದಯ ವರದಿ

**ಹಾಸನ:** ದೇಶದಲ್ಲಿ ಕಾನೂನು, ಕಾಯ್ದೆ ಮೀರಿದವರು ಯಾರು ಇಲ್ಲ. ನಾವೆಲ್ಲರು ಸಂವಿಧಾನ, ನಿಯಮಗಳನ್ನು ಪಾಲನೆ ಮಾಡದೆ ವರಟು ವಾದ ಮಾಡಿದರೆ ಬೆಲೆ ಇಲ್ಲ ಎಂದು ಮಳವಳ್ಳಿ ಶಾಸಕ ಎಂ.ಪಿ. ನರೇಂದ್ರಸ್ವಾಮಿ ಅವರು ಹೇಳಿದರು.

ಭಾನುವಾರ ಹಾಸನಾಂಬ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ನಿಷೇಧಿಸುತ್ತೇವೆಂದು ಎಲ್ಲಿಯೂ ಹೇಳಿಲ್ಲ. ಯಾವುದೇ ಕಾರ್ಯ ಚಟುವಟಿಕೆ ಮಾಡಬೇಕಾದರೆ ಅನುಮತಿ ಪಡೆಯಬೇಕೆಂದು ಹೇಳಿದ್ದೇವೆ. ಸಂಸ್ಥೆ ಮುಖ್ಯಸ್ಥರು ಯಾರು, ಯಾರು ಬರುತ್ತಾರೆ, ಎಷ್ಟು ಮಂದಿ ಭಾಗವಹಿಸುತ್ತಾರೆ ಎಂದು ತಿಳಿದುಕೊಳ್ಳುವುದು ಅವಶ್ಯಕವಾಗಿದೆ ಎಂದು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

ಯಾವುದೇ ಸಭೆ, ಸಮಾರಂಭ ಮಾಡಬೇಕಾದರೆ ಶಸ್ತ್ರಾಸ್ತ್ರಗಳನ್ನು ಬಳಸುವುದನ್ನು ನಿರ್ಬಂಧಿಸಬೇಕೆಂದು ಆರ್‌ಎಸ್‌ಎಸ್‌ಗೆ ಮಾತ್ರವಲ್ಲ ಎಲ್ಲರಿಗೂ ಹೇಳುತ್ತಿದ್ದೇವೆ. ಆದರೆ, ರಾಜ್ಯದಲ್ಲಿ ಆರ್‌ಎಸ್‌ಎಸ್ ಸಂಪೂರ್ಣವಾಗಿ ನಿಷೇಧಿಸುತ್ತೇವೆ, ತಡೆಗಟ್ಟುತ್ತೇವೆ ಎಂಬ ವ್ಯಾಖ್ಯಾನ ತಪ್ಪು ಎಂದರು.

ಮುಸ್ಲಿಮರು ರಸ್ತೆಯಲ್ಲಿ ನಮಾಜ್ ಮಾಡಲು ಅನುಮತಿ ಪಡೆದುಕೊಳ್ಳುತ್ತಾರೋ ಎಂಬ ಮಾಜಿ ಸಚಿವ ಕೆ. ಎನ್.ರಾಜಣ್ಣ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ » ನಾಲ್ಕನೇ ಪುಟದಲ್ಲಿ



### ಪೂರ್ವ ಸಿದ್ಧತೆ ವೇಳೆ ವಿದೇಶದಲ್ಲಿದ್ದು ಈಗ ಪ್ರತಿಭಟನೆ ಅರ್ಥಹೀನ | ಪ್ರೀತಮ್‌ಗೌಡ ತಿರುಗೇಟು

# ಗೌರವ ಕೇಳುವುದಲ್ಲ, ದುಡಿಮೆ ಮಾಡಿ ಪಡೆಯಬೇಕು

• ಪ್ರಜೋದಯ ವರದಿ

**ಹಾಸನ:** ಗೌರವವನ್ನು ಕೇಳಿ ಪಡೆಯುವುದಲ್ಲ, ದುಡಿಮೆ ಮಾಡಿ ಪಡೆಯಬೇಕು. ಸ್ಥಳೀಯ ಶಾಸಕರು ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ಏನೇನು ಆಗಬೇಕೆಂದು ಎಷ್ಟು ಬಾರಿ ಉಸ್ತುವಾರಿ ಸಚಿವರು, ಸರ್ಕಾರ, ಜಿಲ್ಲಾಧಿಕಾರಿಯನ್ನು ಶಾಸಕರು ಭೇಟಿ ಮಾಡಿ ಚರ್ಚಿಸಿದ್ದಾರೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರು ಪ್ರಶ್ನಿಸಿದರು.

ಭಾನುವಾರ ಶಾಸಕರ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಂತೆ ನಗರದ ಅಶೋಕ್ ಹೋಟೆಲ್‌ನಲ್ಲಿ ದಿಢೀರ್ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹಾಸನಾಂಬ ಉತ್ಸವ ಪೂರ್ವ ಸಿದ್ಧತಾ ಸಮಯದಲ್ಲಿ ವಿದೇಶದಲ್ಲಿದ್ದು, ದೇವಾಲಯ ಬಾಗಿಲು ತೆರೆಯುವ ದಿನ ಅತಿಥಿ ರೀತಿ ಆಗಮಿಸಿ ಈಗ ನನಗೆ ಗೌರವ ನೀಡುತ್ತಿಲ್ಲವೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಪ್ರತಿಭಟನೆ ನಡೆಸುತ್ತಿರುವ ಬಾಲಿಶ ಎಂದು ಟೀಕಿಸಿದರು.

ಸ್ಥಳೀಯ ಶಾಸಕರು, ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಟ್ಟಿಲ್ಲ, ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಮುಖ್ಯದ್ವಾರದಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಒಬ್ಬ ಜವಾಬ್ದಾರಿಯುತ ಶಾಸಕನಾಗಿ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಕೆಲಸ ಮಾಡಿಸುವುದನ್ನು ಬಿಟ್ಟು ವಿದೇಶ ಪ್ರವಾಸಕ್ಕೆ ಹೋಗಿದ್ದಾರೆ. ಈಗ ಬಂದು ನನ್ನನ್ನು ನಿರ್ಲಕ್ಷ್ಯ ಮಾಡಿದ್ದಾರೆಂಬ ಆರೋಪವನ್ನು ಯಾರಾದರೂ ಒಪ್ಪುತ್ತಾರೆಯೇ ಎಂದು ಪ್ರಶ್ನಿಸಿದರು.

ಹಾಸನಾಂಬ ಉತ್ಸವ ಎಂದರೆ ಹಾಸನ ಕ್ಷೇತ್ರದ ತಾಯಿಯ ಉತ್ಸವ. ಸ್ಥಳೀಯ ಶಾಸಕರು ತಮ್ಮ ಮನೆ ಕಾರ್ಯಕ್ರಮದಂತೆ ಕೆಲಸ ಮಾಡಬೇಕು. ನಾನು ಶಾಸಕನಾಗಿ ನಾಲ್ಕು ವರ್ಷ ಜಾತ್ರಾ ಮಹೋತ್ಸವ ಮಾಡಿದ್ದೇನೆ. ಆದರೆ, ಈಗಿನ ಶಾಸಕರು ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಯಾವುದೇ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿಲ್ಲ. ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರನ್ನು ದೂಷಿಸುವುದು ಸುಲಭ. » ನಾಲ್ಕನೇ ಪುಟದಲ್ಲಿ



### ಶಾಸಕರಿಂದಲೇ ಹೆಚ್‌ಡಿಕೆಗೆ ಅಗೌರವ

ಜಿಲ್ಲಾಡಳಿತ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಗೌರವ ನೀಡಿಲ್ಲ ಎಂದು ಹೇಳುವುದಕ್ಕೆ ನನ್ನ ಸಹಮತವಿದೆ. ಕುಮಾರಸ್ವಾಮಿ ಅವರು ಎನ್‌ಡಿಎ ಸರ್ಕಾರದ ಸಚಿವರು, ಅವರಿಗೆ ಯಾರಾದರೂ ಅವಮಾನ ಮಾಡಿದ್ದರೆ ಅದು ಶಾಸಕ ಹೆಚ್.ಪಿ. ಸ್ವರೂಪ್ ಅವರು. ಸ್ಥಳೀಯ ಶಾಸಕರಾದವರು ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಂಡು ಅವರಿಗೆ ಸನ್ಮಾನ ಮಾಡಿ ಗೌರವ ಕೊಡದಿರುವುದು ಅಕ್ಷಮ್ಯ ಅಪರಾಧ. ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳದೆ ಹೋದರೆ ಶಾಸಕರಾಗಿರುವುದು ಏಕೆ ಎಂದು ಜನರಿಗೆ ತಿಳಿಸಬೇಕು. ಕುಮಾರಸ್ವಾಮಿ ಅವರ ವಿಚಾರದಲ್ಲಿ ಜಿಲ್ಲಾಡಳಿತ ಮಾಡಿರುವುದು ಅಕ್ಷಮ್ಯ ಅಪರಾಧ. ಅದರಲ್ಲಿ ಶೇ.90 ರಷ್ಟು ಪಾಲು ಸ್ಥಳೀಯ ಶಾಸಕರಿಗೆ ಸಲ್ಲುತ್ತದೆ. ಕೂಡಲೇ ಸ್ವರೂಪ್ ಪ್ರಕಾಶ್ ಅವರು ಕುಮಾರಸ್ವಾಮಿ ಅವರ ಕ್ಷಮೆ ಕೇಳಬೇಕೆಂದು ಹೇಳಿದರು.

# ಆಲೂರು: ಗಣವೇಷಧಾರಿಗಳ ಶಿಸ್ತುಬದ್ಧ ಹೆಜ್ಜೆ

• ಪ್ರಜೋದಯ ವರದಿ

**ಆಲೂರು:** ರಾಷ್ಟ್ರೀಯ ಸ್ವಯಂ ಸೇವಕ ಸಂಘದ 100 ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಪಟ್ಟಣದಲ್ಲಿ ಸುಡು ಬಿಸಿಲಿನಲ್ಲಿ ಸ್ವಯಂ ಸೇವಕರ ಆಕರ್ಷಕ ಪಥ ಸಂಚಲನ ನಡೆಯಿತು. ಗಣವೇಷ ಧಾರಿಗಳು ಶಿಸ್ತು ಬದ್ಧವಾಗಿ ಹೆಜ್ಜೆ ಹಾಕಿ ಜನರ ಗಮನ ಸೆಳೆದರು. ಮೆರವಣಿಗೆಯ ಅಕ್ಕಪಕ್ಕದಲ್ಲಿ ನಿಂತಿದ್ದ ನೋಡುಗರಿಗೆ ದೇಶಭಕ್ತಿ ಹುಟ್ಟಿಸುವಂತೆ ಸಾಗಿದರು. 2 ವರ್ಷದ ಪುಟ್ಟ ಬಾಲಕ ಸಮವಸ್ತ್ರ ಧರಿಸಿ ತನ್ನ ತಂದೆ ಹೆಗಲ ಮೇಲೆ ಗಣ ಹಿಡಿದು ಕುಳಿತು ಮೆರವಣಿಗೆಯಲ್ಲಿ ಸಾಗಿದ್ದು ನೋಡುಗರ ಗಮನ ಸೆಳೆಯಿತು.



ಪಟ್ಟಣ ವೀರಶೈವ ಕಲ್ಯಾಣ ಮಂಟಪದ ಬಳಿ ಸೇರಿದ್ದ ಗಣವೇಶ ಧಾರಿಗಳು ಧ್ವಜ ವಂದನೆ ಸಲ್ಲಿಸಿದರು. ಸಾಮೂಹಿಕವಾಗಿ ನಮಸ್ತೆ ಸದಾ ವತ್ಸಲೆ ಮಾತೃಭೂಮಿ ಎಂಬ ಆರ್.ಎಸ್.ಎಸ್. ಗೀತೆಯನ್ನು ಭಕ್ತಿ ಪೂರ್ವಕವಾಗಿ ಹಾಡಿದರು. ಆರ್.ಎಸ್.ಎಸ್. ಬ್ಯಾಂಡ್ ಹಾಗೂ ತಾಳದ ಲಯಕ್ಕೆ ತಕ್ಕಂತೆ ಗಣವೇಶಧಾರಿಗಳು ಹೆಜ್ಜೆ ಹಾಕಿದರು. ವೀರಶೈವ ಕಲ್ಯಾಣ ಮಂಟಪದಿಂದ ಆರಂಭವಾದ ಪಥ ಸಂಚಲನ ಪಟ್ಟಣದ ಮುಖ್ಯ ಬೀದಿಯಲ್ಲಿ ಸಾಗಿತು. ಆಶಾ ಬಡವಾಣೆ ಮೂಲಕ ಹಾದು ಬಂದ ಪಥ ಸಂಚಲನ ಬಿಕ್ಕೋಡು ರಸ್ತೆ ತಿರುವಿನಲ್ಲಿರುವ ಗಣೇಶ ಪೆಂಡಾಲ್ ಮೈದಾನಕ್ಕೆ ಬಂದು ಸೇರಿತು.

ಪಥ ಸಂಚಲನದಲ್ಲಿ ಸಾಗಿದ ಭಾರತ ಮಾತೆ, ಆರ್.ಎಸ್.ಎಸ್. ಸಂಸ್ಥಾಪಕ ಕೇಶವ ಬಲಿರಾಮ ಹೆಡಗೆವಾರ್ ಮತ್ತು ಗೋಲ್ವಾಲ್ಕರ್ ಗುರೂಜಿ ಚಿತ್ರ ಹೊತ್ತ ಚಿತ್ರ ಹೊತ್ತ ವಾಹನಕ್ಕೆ ಸಾರ್ವಜನಿಕರು ವಂದಿಸಿದರು.

ಶಾಸಕ ಸಿಮೆಂಟ್ ಮಂಜು ಗಣವೇಶ ಧರಿಸಿ ಪಥ ಸಂಚಲನದಲ್ಲಿ ಪಾಲ್ಗೊಂಡಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಮೋಹನ್‌ರೆಡ್ಡಿ ನೇತೃತ್ವದಲ್ಲಿ ಪೊಲೀಸ್ ಬಂದೂಬಸ್ತ್ ಕಲ್ಪಿಸಲಾಗಿತ್ತು. ಪಥ ಸಂಚಲನ ಸಾಗುವ ಹಾದಿಯಲ್ಲಿದ್ದ ಮಸೀದಿಗೆ ಭಾರೀ ಬಂದೂಬಸ್ತ್ ಕಲ್ಪಿಸಲಾಗಿತ್ತು.

ಆರ್.ಎಸ್.ಎಸ್. ಜಿಲ್ಲಾ ಕಾರ್ಯದರ್ಶಿ ನವೀನ್, ಪ್ರಮುಖ ವಿಜಯ್ ಸೇರಿದಂತೆ ನೂರಾರು ಗಣವೇಷ ಧಾರಿಗಳು ಪಾಲ್ಗೊಂಡಿದ್ದರು.

**ಕಾಂಗ್ರೆಸ್‌ಗೆ ಆರ್.ಎಸ್.ಎಸ್. ಕಂಡರೆ ಭಯ:**

ಶತಮಾನದಿಂದ ದೇಶವನ್ನು ಬಲಪಡಿಸುವ ನಿಟ್ಟಿನಲ್ಲಿ ಸಾಗುತ್ತಿರುವ ಆರ್.ಎಸ್.ಎಸ್. ಈಗ ಮತ್ತಷ್ಟು ಬಲಶಾಲಿಯಾಗುತ್ತಿದೆ. ಈ ಬೆಳವಣಿಗೆಯನ್ನು ಕಾಂಗ್ರೆಸ್ ಪಕ್ಷಕ್ಕೆ ಸಹಿಸಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೇವಲ ಒಂದು ಸಮುದಾಯವನ್ನು ಓಲೈಸಲು ಕಾಂಗ್ರೆಸ್ ಪಕ್ಷ ಆರ್.ಎಸ್.ಎಸ್ ರದ್ದು ಮಾಡಲು ಚಿಂತಿಸುತ್ತಿದೆ. ಆರ್.ಎಸ್.ಎಸ್. ಭಯೋತ್ಪಾದಕ ಸಂಘಟನೆಯಲ್ಲಿ. ಆರ್.ಎಸ್.ಎಸ್. ಎಂಬುದು ದೇಶಭಕ್ತಿಯ ಪ್ರತೀಕ ಎಂಬುದ ಅರ್ಥವಾಗದೆ ಸಚಿವ ಪ್ರಿಯಾಂಕ ಖರ್ಗೆ ಆರ್.ಎಸ್.ಎಸ್. ಕುರಿತು ಹಗುರವಾಗಿ ಮಾತನಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ತಿಳಿಸಿದರು.

ಆರ್.ಎಸ್.ಎಸ್.ನ ಪಥ ಸಂಚಲನದಲ್ಲಿ ಪಾಲ್ಗೊಂಡಿದ್ದ ಶಾಸಕ ಸಿಮೆಂಟ್ ಮಂಜುರವರು ಸುಡುಬಿಸಿಲಿಗೆ ಬಳಲಿ ನೀರು ಕುಡಿದರು.

ಆರ್.ಎಸ್.ಎಸ್. ಪಥ ಸಂಚಲನ ಪಟ್ಟಣದಲ್ಲಿ ಶಿಸ್ತುಬದ್ಧವಾಗಿ ಸಾಗಿತು.

ಆರ್.ಎಸ್.ಎಸ್. ಪಥ ಸಂಚಲನದಲ್ಲಿ 2 ವರ್ಷದ ಪುಟ್ಟ ಬಾಲಕ ಸೇವನ್ ಸಮವಸ್ತ್ರ ಧರಿಸಿ ಚಿಕ್ಕಪ್ಪನ ಹೆಗಲ ಮೇಲೆ ಗಣ ಹಿಡಿದು ಸಾಗಿದ್ದು ವಿಶೇಷವಾಗಿತ್ತು.

# ರಾಜ್ಯದಲ್ಲಿ ಇನ್ನೊಂದು ವಾರ ಮಳೆ

## ಹವಾಮಾನ ಇಲಾಖೆ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ವಾತಾವರಣದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮಳೆ ಪ್ರಮಾಣ ಹೆಚ್ಚಾಗಲಿದ್ದು, ವಾರಾಂತ್ಯದವರೆಗೆ ಮುಂದುವರೆಯುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಳೆದ ಮೂರು ನಾಲ್ಕು ದಿನಗಳಿಂದ ರಾಜ್ಯದ ಕರಾವಳಿ, ಮಲೆನಾಡು ಹಾಗೂ ದಕ್ಷಿಣ ಒಳನಾಡಿನ ಹಲವು ಕಡೆಗಳಲ್ಲಿ ಮಳೆಯಾಗುತ್ತಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ಹಲವೆಡೆ ನಿನ್ನೆ ಸಾಧಾರಣ ಮಳೆಯಾಗಿದೆ.

ಅರಬ್ಬೀ ಸಮುದ್ರದಲ್ಲಿ ಹಾಗೂ ಬಂಗಾಳ ಕೊಲ್ಲಿಯಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮದಿಂದ ರಾಜ್ಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರುತ್ತಿದ್ದು, ಆಗಾಗ್ಗೆ ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗುತ್ತಿದೆ.

ಹವಾಮಾನ ಮುನ್ಸೂಚನೆ ಪ್ರಕಾರ ಅ.25ರವರೆಗೆ ಮಳೆ ಮುಂದುವರೆಯಲಿದೆ. ಮುಂಗಾರು ಮಾರುತಗಳು ಮರಳಿದ್ದು, ಹಿಂಗಾರು ಮಾರುತಗಳು ಕ್ರಿಯಾಶೀಲವಾಗಿರುವ ಹಿನ್ನಲೆಯಲ್ಲಿ



ವಾತಾವರಣದಲ್ಲಿ ಹಲವು ಬದಲಾವಣೆಗಳಾಗುತ್ತಿವೆ. ಇದರ ಪರಿಣಾಮದಿಂದ ರಾಜ್ಯದಲ್ಲಿ ಮಳೆಯಾಗುತ್ತಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ಕರಾವಳಿ ಹಾಗೂ ಮಲೆನಾಡಿನ ಕೆಲವು ಕಡೆ ಅಧಿಕ ಮಳೆಯಾಗುವ ಮುನ್ಸೂಚನೆಗಳಿವೆ. ಉತ್ತರ ಒಳನಾಡಿನ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಗಳು ಕಂಡುಬರುತ್ತಿವೆ. ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಹಲವೆಡೆ ಮಳೆಯಾಗುವ ಸಾಧ್ಯತೆಗಳಿವೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ಅಕ್ಟೋಬರ್ ಒಂದರಿಂದ ನಿನ್ನೆಯವರೆಗೆ ದಕ್ಷಿಣ ಒಳನಾಡು ಹೊರತುಪಡಿಸಿ ರಾಜ್ಯದ ಉಳಿದೆಡೆ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಇನ್ನೊಂದು ವಾರದ ಕಾಲ ಉತ್ತಮ ಮಳೆಯಾಗುವ ಸಾಧ್ಯತೆಗಳಿರುವುದರಿಂದ ಮಳೆ ಕೊರತೆಯ ಪ್ರಮಾಣ ಕಡಿಮೆಯಾಗಬಹುದು ಎಂದು ನಿರೀಕ್ಷಿಸಲಾಗಿದೆ.

# ಉದ್ಯೋಗಾವಕಾಶಗಳ ಸದ್ಬಳಕೆಗೆ ಕರೆ

## ಪಠ್ಯದ ಜೊತೆ ಸಾಮಾನ್ಯ ಜ್ಞಾನದ ಕಡೆಗೆ ಹೆಚ್ಚು ಒತ್ತು ನೀಡಬೇಕು

• ಪ್ರಜೋದಯ ವರದಿ

**ಹಾಸನ:** ಪ್ರಸ್ತುತ ಖಾಸಗಿ ಹಾಗೂ ಸರ್ಕಾರಿ ಉದ್ಯಮಗಳಲ್ಲಿ ಬಿಸಿಎ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅನೇಕ ಉದ್ಯೋಗವಕಾಶಗಳು ದೊರೆಯುತ್ತಿದ್ದು, ವಿದ್ಯಾರ್ಥಿಗಳು ಉದ್ಯೋಗಾವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮಹಿಳಾ ಕಾಲೇಜು ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಹೇಳಿದರು.

ನಗರದ ಆರ್.ಸಿ. ರಸ್ತೆ ಗಂಧದ ಕೋಠಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗಣಕ ಯಂತ್ರ ವಿಭಾಗದಿಂದ ವತಿಯಿಂದ 2025-26ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯುವಕರಿಗೆ ಇಂದು ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಅವಕಾಶಗಳಿದ್ದು, ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕೇವಲ ಕೆಲವೇ ಸೀಮಿತ ವಿಷಯಗಳನ್ನೇ ಆಯ್ಕೆ ಮಾಡಿಕೊಳ್ಳುವ ಬದಲಾಗಿದೆ. ಪದವಿ ಹಂತದಲ್ಲಿ ಇಂತಹ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.





ಜೀವನದಲ್ಲಿ ಯಶಸ್ಸು ಕಾಣಲು ಯುವಕರು ಸಮಯಪ್ರಜ್ಞೆ ಇಟ್ಟುಕೊಂಡು ಮುನ್ನಡೆಯಬೇಕು. ಕಲಿಯುವುದನ್ನು ಆಸಕ್ತಿ ಮತ್ತು ಶ್ರದ್ಧೆಯಿಂದ ಕಲಿತರೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಯುವತಿಯರು ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕು ಮಾಡದೆ ಪದವಿ ಹಾಗೂ ಉನ್ನತ ವಿದ್ಯಾಭ್ಯಾಸ ಮಾಡುವುದರ ಮೂಲಕ ಹೆಣ್ಣು ಮಕ್ಕಳು ತಮ್ಮ ಜೀವನ ಕಟ್ಟಿಕೊಳ್ಳಬೇಕು. ತಾವುಗಳು ಕಲಿಯುವ ಜ್ಞಾನ, ವಿಷಯವನ್ನು ಇತರರಿಗೆ ಹಂಚಿಕೊಳ್ಳುವ ಮೂಲಕ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಬೇಕು. ವಿದ್ಯಾರ್ಥಿನಿಯರು ಪಠ್ಯದ ಜೊತೆಗೆ ಸಾಮಾನ್ಯ ಜ್ಞಾನದ ಕಡೆಗೆ ಹೆಚ್ಚು ಒತ್ತು ನೀಡಿದರೆ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಬಹುದು ಎಂದು ಹೇಳಿದರು.

ಗಣಕಯಂತ್ರ ವಿಭಾಗದ ಮುಖ್ಯಸ್ಥ ಎಚ್.ಎಂ. ಸುರೇಶ್ ಕುಮಾರ್, ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ಉಪನ್ಯಾಸಕರಾದ ರಮೇಶ್, ಸಂದೀಪ್, ಪ್ರೀಯಾಂಕ, ವರ್ಷಿತ, ತೇಜಸ್ ಕುಮಾರ್, ಗೀತಾಂಜಲಿ, ಚೈತ್ರ, ಶೃತಿ ಹಾಗೂ ಇತರರು ಹಾಜರಿದ್ದರು.

# ಪಟಾಕಿ ಮಾರಾಟಕ್ಕೆ ಮಕ್ಕಳ ಬಳಕೆ ನಿಷೇಧ

• ಪ್ರಜೋದಯ ವರದಿ

**ಹಾಸನ:** ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ್ಯಾವಸ್ಥೆ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ ಕಾಯ್ದೆ 2016ರನ್ನು ಜಾರಿಗೆ ತರಲಾಗಿದೆ.

ಸದರಿ ಕಾಯ್ದೆಯನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಹಾಗೂ 14 ರಿಂದ 18ರ ವಯಸ್ಸಿನ ಕಿಶೋರ ಕಾರ್ಮಿಕ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಹಾಸನ ಜಿಲ್ಲೆ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಪಟಾಕಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಪಟಾಕಿ ತಯಾರಿಕೆ, ಮಾರಾಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದಿಮೆಗಳ ವ್ಯಾಪ್ತಿಗೆ ಬರುವುದರಿಂದ ಸದರಿ ಅಂಗಡಿಗಳಲ್ಲಿ ಯಾವುದೇ ಕಾರಣಕ್ಕೂ 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳಬಾರದು.

ತಪ್ಪಿದಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಅನ್ವಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಹಾಸನ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿ ಯಮುನ ಕೆ.ಎನ್. ಅವರು ತಿಳಿಸಿದ್ದಾರೆ.

# ಪಟಾಕಿ ಮಾರಾಟ ಮಳಿಗೆ ಸ್ಥಳ ಬದಲು

**ಹಾಸನ:** ಈ ಬಾರಿಯ ದೀಪಾವಳಿ ಹಬ್ಬದ ಪಟಾಕಿ ಮಾರಾಟ ಮಳಿಗೆಯನ್ನು ಚನ್ನಪಟ್ಟಣ ಕೆರೆ ಅಂಗಳದಿಂದ ಎಸ್.ಎಸ್.ಕೃಷ್ಣ ನಗರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಹಾಸನಾಂಬ ಪಟಾಕಿ ವರ್ತಕರ ಸಂಘದ ಅಧ್ಯಕ್ಷ ಮಂಜುನಾಥ್ ಅವರು ಸುದ್ದಿಗೋಷ್ಠಿಯಲ್ಲಿ ಶನಿವಾರ ತಿಳಿಸಿದ್ದು, ಜಿಲ್ಲಾಧಿಕಾರಿ ಅವರ ಸೂಚನೆ ಮೇರೆಗೆ ಸ್ಥಳ ಬದಲಾವಣೆ ಮಾಡಲಾಗಿದೆ. ಯಾರಿಗೂ ತೊಂದರೆ ಆಗದಂತೆ ವ್ಯವಸ್ಥೆ ಮಾಡಿದ್ದು, ಎಲ್ಲರೂ ತಮಗೆ ಒಪ್ಪುವ ಪಟಾಕಿ ಖರೀದಿಸಬಹುದು ಎಂದರು.

# ಆರ್‌ಎಸ್‌ಎಸ್‌ಗೆ 100 ರ ಸಂಭ್ರಮ

## ಬೇಲೂರಿನಲ್ಲಿ ಸಂಭ್ರಮದ ಪಥ ಸಂಚಲನ



• ಪ್ರಜೋದಯ ವರದಿ

**ಬೇಲೂರು:** ಆರ್‌ಎಸ್‌ಎಸ್ ಸಂಘ ಸಂಚಾಲಕ ಮುರುಳಿ ಜೀ ಅವರ ನೇತೃತ್ವದಲ್ಲಿ ಪಟ್ಟಣದಲ್ಲಿ ಪಥ ಸಂಚಲನ ನಡೆಸಿದ ಸ್ವಯಂಸೇವಕರು ಹೊಯ್ಸಳ ವೃತ್ತದ ಮೂಲಕ ನಾನಾ ಬೀದಿಗಳಲ್ಲಿ ಸಂಚರಿಸಿ ಬಸವೇಶ್ವರ ವೃತ್ತ ಮತ್ತು ನಂತರ ಹಳೇಬೀಡಿನ ಪ್ರಮುಖ ರಸ್ತೆಗಳ ಮೂಲಕ ಆಗಮಿಸಿದರು.

ಮೆರವಣಿಗೆ ಮಾರ್ಗವನ್ನು ರಂಗೋಲಿ, ತೋರಣ ಮತ್ತು ಹೂವುಗಳಿಂದ ಅಲಂಕರಿಸಲಾಗಿತ್ತು. ಹಳೇಬೀಡಿನ ಬೀದಿ ಬೀದಿಗಳಲ್ಲಿ ಕೆ.ಬಿ.ಹೆಡ್ಗೆವಾರ್, ವಿನಾಯಕ ದಾಮೋದರ ಸಾರ್ವಕರ್, ಡಾ.ಬಾಬಾ ಸಾಹೇಬ ಅಂಬೇಡ್ಕರ್, ಛತ್ರಪತಿ ಶಿವಾಜಿ ಮಹಾರಾಜ, ಜಗಜ್ಯೋತಿ ಬಸವೇಶ್ವರ, ಸುಭಾಷ್ ಚಂದ್ರ ಬೋಸ್, ಸ್ವಾಮಿ ವಿವೇಕಾನಂದರು, ಬಾಲ ಗಂಗಾಧರ ತಿಲಕ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಶಾಸಕ ಹೆಚ್.ಕೆ. ಸುರೇಶ್ ಸೇರಿದಂತೆ ನೂರಾರು ಸ್ವಯಂ ಸೇವಕರು ಪಥ ಸಂಚಲನದಲ್ಲಿ ಭಾಗವಹಿಸಿದ್ದರು.

# ಮತ ಕಳವು, ಸಚಿವರಿಗೆ 2 ಲಕ ಸಹಿ ಸಂಗ್ರಹ ಗುರಿ: ಕೈ ವರಿಷ್ಠರ ಸೂಚನೆ

**ಬೆಂಗಳೂರು:** ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ ಕಳವು ನಡೆಸುತ್ತಿದೆ ಎಂದು ಆರೋಪಿಸಿ ಆರಂಭಿಸಿರುವ ವೋಟ್ ಚೋರ್ ಗದ್ದಿ ಚೋಡ್ ಅಭಿಯಾನದ ಅಂಗವಾಗಿ ತಮ್ಮ ವಿಧಾನಸಭಾ ಕ್ಷೇತ್ರ ಅಥವಾ ಜಿಲ್ಲೆಯಲ್ಲಿ ಕನಿಷ್ಠ ಎರಡು ಲಕ್ಷ ಸಹಿ ಸಂಗ್ರಹಿಸಿ ಇದೇ 24ರ ಒಳಗೆ ಖುದ್ದಾಗಿ ಕೆಪಿಸಿಸಿಗೆ ಸಲ್ಲಿಸಬೇಕೆಂದು ಎಲ್ಲಾ ಸಚಿವರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೂಚನೆ ನೀಡಿದ್ದಾರೆ.

ಈ ಬಗ್ಗೆ ಎಲ್ಲಾ ಸಚಿವರಿಗೆ ಪತ್ರ ಬರೆದಿರುವ ಶಿವಕುಮಾರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಥವಾ ಬ್ಲಾಕ್ ಕಾಂಗ್ರೆಸ್ ಸಮಿತಿಯ ಮೂಲಕ ನಡೆದ ಸಹಿ ಸಂಗ್ರಹವನ್ನು ಹೊರತು ಪಡಿಸಿ ವೈಯಕ್ತಿಕವಾಗಿ 2 ಲಕ್ಷ ಸಹಿ ಸಂಗ್ರಹಿಸಬೇಕು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈ ಸೂಚನೆ ನೀಡಿದ್ದಾರೆ ಎಂದೂ ಹೇಳಿದ್ದಾರೆ.

# ಪರಿಸರ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆಗಾಗಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿ, ಸಂಸ್ಥೆಗಳನ್ನು ಗುರುತಿಸುವುದಕ್ಕಾಗಿ ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿಗಾಗಿ ಅರ್ಜಿ, ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿಯನ್ನು ವ್ಯಕ್ತಿ ಮತ್ತು ಸಂಸ್ಥೆಗಳ (ಸರ್ಕಾರಿ ವಲಯ, ಸರ್ಕಾರೇತರ ಸಂಸ್ಥೆ, ಕಂಪನಿ ಟ್ರಸ್ಟುಗಳು ಇತರೆ), ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆ ಕ್ಷೇತ್ರಗಳಲ್ಲಿನ ಗಣನೀಯ ಸೇವೆಗಾಗಿ ನೀಡಲಾಗುವುದು.

ಈ ಪ್ರಶಸ್ತಿಗಳನ್ನು ಹಾಸನ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಮೂರು ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ನೀಡಲಾಗುವುದು.

ಪ್ರಶಸ್ತಿಗೆ ಆಯ್ಕೆ ಮಾಡುವಾಗ ಈ ಕೆಳಗಿನ ಒಂದು ಅಥವಾ ಉಭಯ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ, ಆರಂಭಶೀಲತೆ, ಯೋಜನೆ, ಕಾರ್ಯಕ್ರಮಗಳ ಮೂಲಕ ನೀಡಿರುವ ಕೊಡುಗೆಯ ಮೌಲ್ಯ ನಿರ್ಣಯ ಮಾಡಲಾಗುವುದು.

ವಿವರಗಳನ್ನು ಒಳಗೊಂಡಿರುವ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಮಾತ್ರವೇ ಸಲ್ಲಿಸಬೇಕು. ವ್ಯಕ್ತಿ, ಸಂಸ್ಥೆಯ ಹೆಸರು. ವ್ಯವಹರಿಸಬೇಕಾದ ವಿಳಾಸ.

ಪ್ರಶಸ್ತಿ ಸಮಿತಿಯು ಅಗತ್ಯವಿದ್ದಲ್ಲಿ ಅರ್ಜಿದಾರರು, ನಾಮ ನಿರ್ದೇಶನ ಮಾಡುವವರು ಪ್ರತಿಪಾದಿಸುವ ಕಾರ್ಯಗಳ ಕುರಿತಾಗಿ ಕ್ಷೇತ್ರ ಸಮೀಕ್ಷೆ ನಡೆಸುವ ಅಧಿಕಾರವನ್ನು ಹೊಂದಿರುತ್ತದೆ.

ಆಧಾರ ರಹಿತ ಪುತಿಪಾದನೆ ಮಾಡುವ ಹಾಗೂ ಪ್ರಭಾವ ಬೀರುವ ಅರ್ಜಿದಾರರನ್ನು ಈ ಪ್ರಶಸ್ತಿಗೆ ಹಾಗೂ ಇನ್ನು ಮುಂದಿನ ಯಾವುದೇ ಪ್ರಶಸ್ತಿಗೆ ಅನರ್ಹಗೊಳಿಸಲಾಗುವುದು.

ಮಾಹಿತಿಗಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ, ಪ್ಲಾಟ್ ನಂ.1-ಎ, ಬಿ.ಕಾಟಿಹಳ್ಳಿ ಇಂಡಸ್ಟ್ರಿಯಲ್ ಏರಿಯಾ, ಬಿ.ಎಂ. ರಸ್ತೆ, ಹಾಸನ-573201 ಸಂಪರ್ಕಿಸಬಹುದಾಗಿದೆ.

# ಯುವಕರು ತಂಬಾಕು, ದುಶ್ಚಟಗಳಿಂದ ದೂರ ಇರಬೇಕು

• ಪ್ರಜೋದಯ ವರದಿ

**ಹಾಸನ:** ಯುವಕರು ತಂಬಾಕು ಮತ್ತು ದುಶ್ಚಟಗಳಿಂದ ದೂರ ಇರಬೇಕೆಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಸನ ಜಿಲ್ಲಾ ಸಲಹೆಗಾರರಾದ ಮಮತ ಅವರು ಕರೆ ನೀಡಿದರು.

ನಗರದ ಕುವೆಂಪು ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ತಂಬಾಕು ನಿಯಂತ್ರಣ ಮತ್ತು ಅದರ ದುಷ್ಪರಿಣಾಮಗಳನ್ನು ಕುರಿತು ಯುವಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತಾನಾಡಿದ ಅವರು, ಇಂದು ಸಾರ್ವಜನಿಕರು ತಂಬಾಕು ಸೇವಿಸದಿದ್ದರೂ ಕೂಡ ವಾತಾವರಣದಲ್ಲಿ ತಂಬಾಕಿನ ಅಂಶ ಅಡಕವಾಗಿದೆ ಎಂದು ಎಚ್ಚರಿಸಿದರು.

ಬೀಡಿ, ಸಿಗರೇಟ್, ಗುಟ್ಕ, ಮಧ್ಯಪಾನ, ಇವುಗಳ ಸೇವನೆಯಿಂದ ಕ್ಯಾನ್ಸರ್ ಮತ್ತು ಹೃದಯಘಾತ, ಕಿಡ್ನಿ ವೈಫಲ್ಯತೆ ಇಂತಹ ಮಾರಕ ರೋಗಗಳಿಗೆ ಜನರು ತುತ್ತಾಗುತ್ತಿದ್ದಾರೆ. ಶಾಲಾ- ಕಾಲೇಜುಗಳ ಹತ್ತಿರ ಧೂಮಪಾನವನ್ನು ನಿಷೇಧಿಸಲಾಗಿದೆ ಮತ್ತು ಅಕ್ರಮವಾಗಿ ಮಾರಾಟ ಮಾಡುವವರ ಮೇಲೆ ಇಲಾಖೆಯು ದಂಡ ಹಾಕುವುದು ಅಂಗಡಿ ಲೈಸೆನ್ಸ್ ರದ್ದುಪಡಿಸುವುದು ನ್ಯಾಯಾಲಯದಲ್ಲಿ ಕೇಸು ದಾಖಲಿಸುವುದು ಮುಂತಾದ ಶಿಸ್ತು ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ತಿಳಿಸಿ ಯುವ ಜನತೆ ಇಂತಹ ದುಷ್ಚಚಟದಿಂದ ದೂರವಿದ್ದು ಸುಖಿ ಜೀವನ ನಡೆಸಬೇಕೆಂದು ಕರೆ ನೀಡಿದರು.





ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಿಲ್ಲಾ ಸಂಯೋಜಕಿ ಕೆ. ಆರ್.ದೀಪಿಕ ಮಾತನಾಡಿ, ಪೋಕ್ಸೋ ಕಾಯಿದೆಯ ಬಗ್ಗೆ ತಿಳಿಸುತ್ತಾ ಹೆಣ್ಣು ಮಕ್ಕಳಿಗೆ 18 ವರ್ಷ ಮತ್ತು ಗಂಡು ಮಕ್ಕಳಿಗೆ 21 ವರ್ಷ ಆಗದ ಮಕ್ಕಳಿಗೆ ಬಾಲ್ಯ ವಿವಾಹ ಮಾಡುವುದು ಅಪರಾಧ. ಈ ತರಹದ ಘಟನೆಗಳು ನಡೆದಲ್ಲಿ ಪೋಕ್ಸೋ ಕಾಯಿದೆ ಅಡಿಯಲ್ಲಿ ಗಂಡು ಮಕ್ಕಳಿಗೆ ಜೈಲಿಗೆ ಹಾಕುವ ಶಿಕ್ಷೆ ವಿಧಿಸುವ ಕಾನೂನು ಇದೆ ಎಂದು ತಿಳಿಸಿದರು.

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಈ ರೀತಿಯ ಘಟನೆ ಸಂಭವಿಸಿದಲ್ಲಿ ದೂರವಾಣಿ ಸಂಖ್ಯೆ 1098 ಮತ್ತು ಸಖಿ -1 ಸ್ಟಾಫ್ ಸೆಂಟರ್ ಮಾಹಿತಿಯನ್ನು ಸಾರ್ವಜನಿಕರು ನೀಡಬಹುದು ಮಾಹಿತಿ ನೀಡಿದ ಸಾರ್ವಜನಿಕರ ಮಾಹಿತಿಯನ್ನು ಗೌಪ್ಯವಾಗಿ ಇಡಲಾಗುವುದು. 18 ಮತ್ತು 21 ವರ್ಷದ ಒಳಗೆ ಅಫರಾಧ ಮಾಡಿದ್ದಲ್ಲಿ ಬಾಲಾಫರಾಧ ಎಂದು ಪರಿಗಣಿಸಿ ಅವರನ್ನು ರಿಮಂಡ್ ಹೋಮ್‌ಗೆ ಕಳುಹಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾಲೇಜಿನ ಸಂಸ್ಥಾಪಕ ಕಾರ್ಯದರ್ಶಿ ಬಿ.ಈ ಶಿವರಾಮೇಗೌಡ, ಕಾಲೇಜಿನ ಪ್ರಾಂಶುಪಾಲ ಕೆ.ಆರ್. ಹರೀಶ್ ಹಾಗೂ ಇಲಾಖೆಯ ಶ್ರೀಪ್ರಿಯ, ಕನ್ನಡ ಉಪನ್ಯಾಸಕ ಮಹೇಂದ್ರ, ವಾಣಿಜ್ಯ ಶಾಸ್ತ್ರ ಉಪನ್ಯಾಸಕಿ ಅರ್ಚನ ಇನ್ನಿತರರು ಉಪಸ್ಥಿತರಿದ್ದರು.

# ಅ.27 ರಿಂದ ವಿವಿಧ ಪಶುಪಾಲನಾ ಚಟುವಟಿಕೆಗಳ ತರಬೇತಿ ಆರಂಭ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಆಸಕ್ತಿಯುಳ್ಳ ಎಲ್ಲರಿಗೂ ಪಶು ಪಾಲನಾ ಇಲಾಖೆಯ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ, ಹಾಸನ ವತಿಯಿಂದ ವಿವಿಧ ಪಶು ಪಾಲನಾ ಚಟುವಟಿಕೆಗಳ ತರಬೇತಿಯನ್ನು ಏರ್ಪಡಿಸಲಾಗಿದೆ.

ತರಬೇತಿಯಲ್ಲಿ ಭಾಗವಹಿಸುವ ಶಿಭಿರಾರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಅಥವಾ ಸ್ಟೈಪಂಡ್ ನೀಡಲಾಗುವುದಿಲ್ಲ. ಆಸಕ್ತಿಯುಳ್ಳವರು ಆಧಾರ್ ಕಾರ್ಡ್, ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದವರು ಜಾತಿ ಪ್ರಮಾಣ ಪತ್ರ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರದೊಂದಿಗೆ ತರಬೇತಿ ಪ್ರಾರಂಭವಾಗುವ ದಿನಾಂಕದಂದು ಬೆಳಿಗ್ಗೆ 10.30 ಗಂಟೆಯೊಳಗೆ ಉಪ ನಿರ್ದೇಶಕರ ಕಚೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ



ಕೇಂದ್ರ, ಬಿ.ಎಂ ರಸ್ತೆ ಸಂತೇಪೇಟೆ, ಹಾಸನದಲ್ಲಿ ಹಾಜರಾಗಬೇಕೆಂದು ತಿಳಿಸಿದೆ.

**ತರಬೇತಿ ವಿವರ:** ರೈತರಿಗೆ ಆಧುನಿಕ ಕುರಿ ಮತ್ತು ಮೇಕೆ ಸಾಕಣಿಕೆ ತರಬೇತಿ ಅ.27 ರಿಂದ ಅ.28 ರವರೆಗೆ, ರೈತರಿಗೆ ವೈಜ್ಞಾನಿಕ ಆಧುನಿಕ ಕೋಳಿ ಸಾಕಣಿಕೆ ತರಬೇತಿ ಅ.30 ಮತ್ತು ಅ.31 ರವರೆಗೆ ಆಗಿದೆ.

ಮಾಹಿತಿಗಾಗಿ ದೂ.ಸಂಖ್ಯೆ: 08172-235226 ಸಂಪರ್ಕಿಸಲು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಕೆಟ್ಟದನು ಕಳೆಯುತ ಒಳ್ಳೆಯದನು ಪಡೆಯಲು ಆಚರಿಸುವ ಹಬ್ಬವೇ ದೀಪಾವಳಿ

**ದೀಪವನು ಹಚ್ಚುತಲಿ ಸಾಗುವರು ಮಹಿಳೆಯರು**
**ಶಾಪವನು ತೊರೆವಂತೆ ಬದುಕಿನಲ್ಲಿ**
**ದೂಪವನು ಹಾಕುತಲಿ ದೇವರಿಗೆ ನಮಿಸುತಲಿ**
**ಕೋಪವನು ದೂರವಿಡು ಲಕ್ಷ್ಮಿದೇವಿ......**

ದೀಪಾವಳಿ ಹಬ್ಬದ ಪ್ರಯುಕ್ತ ಮನೆಗಳಲ್ಲಿ ನಡೆಯುವ ದೇವರ ಪೂಜೆ ವಿಶೇಷವಾಗಿದ್ದು. ಹಚ್ಚುತ್ತಾ ಅಂಗಣಗಳಲ್ಲಿ ದೀಪಗಳನ್ನು ಇಟ್ಟು ಪೂಜಿಸುವುದು ಸರ್ವೆ ಸಾಮಾನ್ಯವಾಗಿ. ಯಾವುದೇ ಶಾಪವಿರಲಿ ಅದನ್ನ ತೊರೆಯುವಂತೆ ಬೇಡಿಕೊಳ್ಳುತ್ತಾ ಬದುಕಲ್ಲಿ ಸಂತೋಷ ಕಾಣಲು ದೇವರಿಗೆ ಧೂಪವನ್ನು ಹಾಕುತ್ತಾ ನಮಿಸುತ್ತಾರೆ. ಕೋಪವನ್ನು ದೂರ ಬಿಡುವಂತೆ ಕೇಳಿಕೊಳ್ಳುತ್ತಾ ಒಳ್ಳೆಯ ಬೆಳಕು ಬದುಕಿನಲ್ಲಿ ಮೂಡುವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ. ದೇವರಿಗೆ ಅಭಿಷೇಕ ಮಾಡುವ ಮೂಲಕ ಐಶ್ವರ್ಯ ಮತ್ತು ಸಮೃದ್ಧಿಗಾಗಿ ಆಶೀರ್ವಾದವನ್ನು ಪಡೆಯಲು ಪೂಜಿಸುತ್ತಾರೆ.

ಕುಟುಂಬದಲ್ಲಿ ಯಾವುದೇ ಶುಭ ಆರಂಭ,ಐಶ್ವರ್ಯ, ಆರೋಗ್ಯ, ಸಮೃದ್ಧಿ, ಯೋಗಕ್ಷೇಮ ಎಲ್ಲವನ್ನು ಕರುಣಿಸುವಂತೆ ಕೇಳಿಕೊಳ್ಳುತ ಈ ದೀಪಾವಳಿಯ ಹಬ್ಬವನ್ನು ಸಂಭ್ರಮದಲ್ಲಿ ಆಚರಿಸುವುದುಂಟು . ಕುಟುಂಬದವರ ಪರವಾಗಿ ಹಿರಿಯ ಜೀವಗಳು ವಿಶೇಷವಾದ ಪೂಜೆ ಪ್ರಾರ್ಥನೆ ಅಭಿಷೇಕವನ್ನು ಮಾಡಿ ಒಳ್ಳೆಯದಾಗಲು ದೇವರಲ್ಲಿ ಪ್ರಾರ್ಥನೆ ಮಾಡಿ ಕೇಳಿಕೊಳ್ಳುವರು.

**ನೀವು ಏನು ಬೇಕು ಅದನ್ನು ಪೂಜೆಯ ಮುಕಾಂತರ ಕುಟುಂಬ ಸದಸ್ಯರು ಸೇರಿ ಹಬ್ಬವನ್ನು ದೀಪ ಹಚ್ಚಿ ಆಚರಿಸುತ್ತಾರೆ.**

ಬೆಳಕು ಮೂಡಿಸುವ ಹಬ್ಬ ದೀಪಾವಳಿ ಹಬ್ಬ ಎಂಬ ಅರಿವು ಎಲ್ಲರಿಗೂ ಇದೆ. ಭಾರತದ ಎಲ್ಲೆಡೆಯೂ ಸಂಭ್ರಮದಿಂದ ಆಚರಿಸುವಂತಹ ಹಬ್ಬವಾಗಿದ್ದು ಇದು ಹಿಂದೂಗಳ ಪವಿತ್ರವಾದ ಹಬ್ಬವಾಗಿದೆ. ದೀಪಗಳನ್ನು ಹಚ್ಚಿ ಹಬ್ಬವನ್ನು ಆಚರಿಸುವುದು ನಮ್ಮ ಸ್ತ್ರೀಯರ ವಾಡಿಕೆ. ಮನೆಯಲ್ಲಿ ಆರೋಗ್ಯ ಐಶ್ವರ್ಯ ತುಂಬಿ ತುಳುಕಲು ಈ ಹಬ್ಬವನ್ನು ಆಚರಿಸುತ್ತಾರೆ. ಭಾರತದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸುವುದುಂಟು. ಆಚರಿಸುವ ವಿಧಿ- ವಿಧಾನಗಳು ಸಹ ಸರ್ವೆ ಸಾಮಾನ್ಯವಾಗಿ ಒಂದೇ ತರನಾಗಿರುತ್ತದೆ. ಸಾಮಾನ್ಯವಾಗಿ 14 ವರ್ಷ ವನವಾಸದ ನಂತರದಲ್ಲಿ ಶ್ರೀ ರಾಮನು ಗೃಹಪ್ರವೇಶ ಮಾಡಿದ ದಿನವನ್ನು ಹಾಗೂ ರಾವಣನ ಮೇಲೆ ವಿಜಯವನ್ನು ಸಾಧಿಸಿದ ದಿನವನ್ನು ಈ ದೀಪಾವಳಿಯ ಹಬ್ಬದ ಸಂಭ್ರಮದಲ್ಲಿ ಆಚರಿಸುವ ಪ್ರತೀತಿ ಇದೆ. ದಕ್ಷಿಣ ಭಾಗದಲ್ಲಿ ಶ್ರೀ ಕೃಷ್ಣನು ಅಸುರ ನರಕಾಸುರನನ್ನು ವದೆ ಮಾಡಿದ ನೆನಪಿಗೆ ಆಚರಿಸುವುದು ಎಲ್ಲರಿಗೂ ತಿಳಿದಿದೆ. ಅಷ್ಟೇ ಅಲ್ಲದೆ ಕೆಲವೇ ಬಾಲಿ ವಿರುದ್ಧದ ಅದ್ಭುತ ವಿಜಯಕ್ಕಾಗಿ ಭಗವಾನ್ ವಿಷ್ಣುವನ್ನು ಪೂಜಿಸಲಾಗುತ್ತದೆ. ದಂತೇರಸ್ ನಿಂದ ಆರಂಭವಾಗಿ ನಂತರ ನರಕ ಚತುರ್ದಶಿ ಅಶ್ವಿಜ ಕೃಷ್ಣ ಅಮಾವಾಸ್ಯೆ. ಕೇದಾರ ಗೌರಿ ವ್ರತ ಮತ್ತು ಬಲಿ ಪ್ರತಿಪದೆ ಯಲ್ಲಿ ಹಬ್ಬವನ್ನು ಸಂಪನ್ನಗೊಳಿಸಲು ಲಕ್ಷ್ಮಿ ಪೂಜೆಗಾಗಿ ವಿವಿಧ ಪ್ರೀತಿಯ ಯೋಚನೆಗಳನ್ನು ಮಾಡಿ ಸಂಪನ್ನಗೊಳಿಸುವುದು. ಈ ದಿನದಲ್ಲಿ ಕೆಟ್ಟ ಪ್ರಭಾವಗನ್ನು ಹೋಗಲಾಡಿಸಿ ಒಳ್ಳೆಯ ಗೆಲುವನ್ನು ಪಡೆಯುವ ಸೂಚನೆಯನ್ನು ಹೊಂದಿರುವುದರಿಂದ ಗೆಲುವಿಗಾಗಿ ಹಪಹಪಿಸುತ್ತಾ ಪೂಜೆಗಳನ್ನು ಹಿಂದೂಗಳು ಮಾಡುವುದು ವಿಶೇಷ. ಹಿಂದೂ ಧರ್ಮದಲ್ಲಿ ಈ ದಿನದ ಮಹತ್ವ ಅಪಾರವಾದದ್ದು ಎಂದು ತಿಳಿದು ರಾಮನ ವಿಜಯವನ್ನು ನೆನೆದು ಸಂಭ್ರಮದಲ್ಲಿ ಹಬ್ಬವನ್ನು ಆಚರಿಸುತ್ತಾರೆ. ಸರ್ವೆ ಸಾಮಾನ್ಯವಾಗಿ ದೀಪಾವಳಿ ಎಂಬ ಪದವು ಹಿಂದಿ ಪದವಾಗಿರುವುದನ್ನು ತಿಳಿದ ವಿಚಾರ ಅದರ ಅರ್ಥ ವನ್ನು ಪ್ರತಿಯೊಬ್ಬರು ಅರ್ಥೈಸಿಕೊಂಡಿದ್ದಾರೆ. ಬೆಳಕು ಮೂಡಿಸುವಂತಹ ದೀಪ ಹಚ್ಚುವುದರ ಮುಖಾಂತರ ಈ ಹಬ್ಬವನ್ನು ಸಂತೋಷ ದಿಂದ ಆಚರಿಸುವುದುಂಟು. ರಾಮನು ರಾವಣನನ್ನು ಸದೆಬಡೆದ ದಿನವಿದು. ಕೆಟ್ಟ ಹುಳುವಾದ ರಾವಣವನ್ನು ಸಂಹರಿಸಿ ಮನೆಗೆ ಗೃಹಪ್ರವೇಶವನ್ನು ಮಾಡುವ ದಿನವನ್ನು ವಿಶೇಷವಾಗಿ ದೀಪಾವಳಿ ಹಬ್ಬವೆಂದು



ಆಚರಿಸುವುದುಂಟು. ರಾಮನು ವಿಜಯವನ್ನು ಸಾಧಿಸಿ ಅಯೋಧ್ಯೆಗೆ ಬರುವಾಗ ಜನರು ಸ್ವಾಗತವನ್ನು ಮಾಡಿ ವಿಜಯದ ಪತಾಕೆ ಯೊಂದಿಗೆ ದೀಪಗಳನ್ನು ಬೆಳಗಿಸಿ ಕೆಟ್ಟದರ ಮೇಲೆ ಒಳಿತಿನ ವಿಜಯವನ್ನು ಘೋಷಿಸಿದ ಸಂಭ್ರಮದ ದಿನವದು ದೀಪಾವಳಿಯ ಮುನ್ನಾ ದಿನದಂದು ಜನರು ಲಕ್ಷ್ಮಿ ದೇವತೆ ಹಾಗೂ ಗಣೇಶನನ್ನು ಸಂಭ್ರಮದಲ್ಲಿ ಪೂಜಿಸುತ್ತಾರೆ. ಬರುವ ಸಂಕಷ್ಟಗಳು ಅಡೆತಡೆಗಳು ನಾಶವಾಗಲೆಂದು ಈ ಪೂಜೆಯನ್ನು ಆಚರಿಸುವುದು. ಹಬ್ಬದಂದು ಬುದ್ಧಿವಂತಿಕೆ ಜ್ಞಾನಾಭಿವೃದ್ಧಿಗಾಗಿ ಪೂಜಿಸುತ್ತಾ ಸಂಪತ್ತು ಲಕ್ಷ್ಮಿಯನ್ನು ನೀಡೆಂದು ಲಕ್ಷ್ಮಿ ದೇವಿಯನ್ನು ಪೂಜಿಸುವುದುಂಟು ದೀಪಾವಳಿಯ ಪೂಜೆ ಎಂದು ಎಲ್ಲಾ ದೇವತೆಗಳ ಆಶೀರ್ವಾದ ಸಿಕ್ಕುವುದೆಂಬ ನಂಬಿಕೆ ಇದೆ. ಒಟ್ಟಾರೆ ಹಲವಾರು ಜನರು ಈ ದೀಪಾವಳಿ ಹಬ್ಬವನ್ನು ಪವಿತ್ರವಾದ ಹಿಂದೂಗಳ ಹಬ್ಬವೆಂದು ಮನೆ ಮತ್ತು ಅಂಗಡಿಗಳನ್ನು ಶುಚಿಗೊಳಿಸಿ ಸಂಭ್ರಮದಲ್ಲಿ ಆಚರಿಸುತ್ತಾರೆ. ಕತ್ತಲೆಯನ್ನು ತೊಲಗಿಸಿ ಬೆಳಕಿನ ವಿಜಯವನ್ನು, ಗೆಲುವನ್ನು ತೋರಿಸುವ ಹಬ್ಬವಿದು. ಮನ ಮನೆಗಳಲ್ಲಿ ಬೆಳಕು ಮೂಡಿಸುವ ಹಬ್ಬವಿದು. ಎಲ್ಲರೊಂದಿಗೆ ಒಟ್ಟುಗೂಡಿ ಸಂಭ್ರಮದಲ್ಲಿ ಆಚರಿಸುವ ಹಬ್ಬವಿದು.

**ಹಬ್ಬದ ವಿಚಾರವನ್ನು ಕೆಲವು ಪದಗಳ ರೂಪ ಹೇಳಬೇಕೆಂದರೆ**

*ಜ್ಞಾನವ ಮೂಡಿಸುತ*
*ಒಳ್ಳೆಯತನವ ನೀಡುತ*
*ವಿಜಯ ಸಾಧಿಸಿದ ಹಬ್ಬವಿದು.*
*ಸಂಪತ್ತು ಸಮೃದ್ಧಿಗಾಗಿ*
*ಹಪಹಪಿಸುತ ಪೂಜಿಸುವ ಹಬ್ಬವಿದು*

ಸಂಸ್ಕೃತಿಯ ಉಳಿಸುತ್ತ ಬದುಕಿನ ಮುಂದಿನ ಬದುಕಿನ ಮುಂದಿನ ದಿನಗಳು ಸುಗಮವಾಗಿ ಸಾಗಲೆಂದು ಬೇಡುತ ಸಾಗುವ ಹಬ್ಬ. ಕುಟುಂಬದಲ್ಲಿ ಎಲ್ಲರೂ ಜೊತೆಗೂಡಿ ಉಡುಗೊರೆಯನ್ನು ನೀಡುತ ಸಂಭ್ರಮಿಸುವ ಹಬ್ಬವಿದು. ಹಳೆಯ ಕೊಳೆಯ ತೊಳೆದು ಹೊಸತನದಲ್ಲಿ ಚಿಗುರ ಮೂಡಿಸಲು ನಡೆಯುವ ದಾರಿಯ ಹಬ್ಬವಿದು.

**ಕೆಲವು ಪದಗಳಲ್ಲಿ ಹೇಳಬೇಕಂದರೆ**

*ಕೆಟ್ಟಗಳಿಗೆಯನು ಕಳೆದು*
*ಒಳ್ಳೆಯ ಗಳಿಗೆಯ*
*ಆಹ್ವಾನವೇ ದೀಪಾವಳಿ.....*
*ಕತ್ತಲೆಯನು ಕಳೆಯೆಂದು*
*ಬೆಳಕನು ನೀಡೆನುತ*
*ಆಚರಿಸುವ ಆಸೆಯ*
*ಹಬ್ಬವಿದು ದೀಪಾವಳಿ......*

ಈ ಹಬ್ಬದ ಬಗ್ಗೆ ಪೌರಾಣಿಕ ಕಥೆಗಳು ಬಹಳಷ್ಟುವೇ ವಿಶೇಷವಾಗಿ ನಾವು ಮೇಲೆ ತಿಳಿದಂತೆ ಶ್ರೀ ರಾಮನು ರಾವಣನ ಸಂಹರಿಸಿ ಅಯೋಧ್ಯೆಯಿಂದ ಮರಳಿದ ದಿನವೆಂದು ಆಚರಿಸುತ್ತ ದೀಪವನ್ನು ಬೆಳಗಿಸುತ್ತ ಆತನನ್ನು ಸ್ವಾಗತಿಸುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅದೇ ದಿನವನ್ನು ದೀಪಾವಳಿಯ ಹಬ್ಬ ಎಂದು ಆಚರಿಸುತ್ತೇವೆ ಎಂಬುದು ನಮ್ಮ ಹಿಂದೂ ಸಂಸ್ಕಾರದಲ್ಲಿ ಅಚ್ಚೆಯಾಗಿದೆ.

ಸೂರ್ಯನ (ಬಾಲಿ) ಸಂಹಾರವನ್ನು ಶ್ರೀ ಕೃಷ್ಣನು ಮಾಡಿದ ದಿನವಾಗಿ ಈ ಹಬ್ಬವನ್ನು ಆಚರಿಸುತ್ತಾರೆ ದಕ್ಷಿಣ ಭಾಗದಲ್ಲಿ ಅವರ ನಂಬಿಕೆಯ ಫಲವಾಗಿ ದೀಪವನ್ನು ಹಚ್ಚುತ್ತಾ ಸಂಭ್ರಮದಲ್ಲಿ ಆಚರಿಸುತ್ತಾರೆ. ವಾಮನ ದೈತ್ಯ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದ ದಿನದ ನೆನಪಿಗಾಗಿ ಬಲಿಪಾಡ್ಯಮಿಯನ್ನ ಆಚರಿಸುವುದುಂಟು. ಈ ಹಬ್ಬದ ಪ್ರಮುಖ ಆಚರಣೆಗಳಲ್ಲಿ ನಾವು ಕಾಣುವುದೇನಂದರೆ ಪುಟ್ಟ ಪುಟ್ಟ ಮಕ್ಕಳಿಂದ ಹಿಡಿದು ದೊಡ್ಡವರು ಸಹ ದೀಪವನ್ನು ಹಚ್ಚುತ್ತ ಸಂಭ್ರಮದಲ್ಲಿ ಮನೆಯನ್ನು ಸ್ವಚ್ಚಗೊಳಿಸಿ ಪೂಜಿಸುತ ಸಂಭ್ರಮಿಸುದುಂಟು

ಪುರುಷರು ಸ್ತ್ರೀಯರು ಸೇರಿ ಎಲ್ಲರೂ ಮನೆಯ ಕುಟುಂಬ ಸದಸ್ಯರೆಲ್ಲ ಲಕ್ಷ್ಮಿ ಪೂಜೆಯನ್ನು ಮಾಡುವುದುಂಟು

ಪ್ರತಿಯೊಬ್ಬರಿಗೂ ಸಿಹಿಯನ್ನು ನೀಡುತ ವಿಧವಿಧವಾದ ಅಡುಗೆ ಮಾಡಿ ಸವಿಯುವುದುಂಟು

ಪಟಾಕಿಗಳನ್ನು ಸಿಡಿಸುತ ಜೀವನದಲ್ಲಿ ಸಂತಸವ ನೀಡೆಂದು ಬೇಡುವುದುಂಟು ಪ್ರಪಂಚದಾದ್ಯಂತ ಈ ಹಬ್ಬವನ್ನು ಪ್ರೀತಿ, ವಿಶ್ವಾಸ, ಉತ್ಸಾಹ ಮತ್ತು ಸಂಭ್ರಮದಲ್ಲಿ ಆಚರಿಸುತ ಒಬ್ಬರಿಗೊಬ್ಬರು ಒಳ್ಳೆಯ ಭಾವವನ್ನು ತೋರುತಲಿ ಕೆಟ್ಟ ಭಾವನೆಗಳನ್ನು ಪಟಾಕಿ ಸಿಡಿಸುವ ರೀತಿಯಲ್ಲಿ ಸುಟ್ಟಾಕುವುದುಂಟು. ದೀಪಾವಳಿ ಬರುವ ಮುಂಚೆಯೇ ನಮ್ಮ ಹೆಣ್ಣು ಮಕ್ಕಳ ಕೆಲಸಗಳು ಮನೆಯಲ್ಲಿ ಪ್ರಾರಂಭವಾಗುವುದುಂಟು.

ದೀಪಾವಳಿ ಹಬ್ಬದ ಬರುವ ಮುಂಚಿನಿಂದಲೇ ಮನೆ, ಅಂಗಡಿ, ಕಟ್ಟಡಗಳು, ಪ್ರತಿಯೊಂದು ಜಾಗಗಳನ್ನು ಸ್ವಚ್ಚಗೊಳಿಸುತ ಹೊಸ ಉಡುಪುಗಳನ್ನು ಸಂಭ್ರಮದಲ್ಲಿ ಖರೀದಿಸುತ ಹಬ್ಬದ ದಿನಗಳಲ್ಲಿ ಧರಿಸುತ್ತ ಹಬ್ಬಕ್ಕೆ ಸಜ್ಜಾಗುವುದುಂಟು ದೀಪಾವಳಿ ಹಬ್ಬವು ಸಂತೋಷವನ್ನು ತರಲೆಂದು ಆಶಿಸುತ್ತಾ ಆಚರಿಸುವುದುಂಟು.

ಈ ಹಬ್ಬದ ಪ್ರಮುಖ ಪಾತ್ರಧಾರಿಗಳು ಎಂದರೆ ಮಕ್ಕಳು ಎಲ್ಲರೂ ಸಹ ಕಡಿಮೆ ಪಟಾಕಿಗಳನ್ನು ಬಳಸುತ್ತ, ಗಮನವನ್ನು ನೀಡುತ್ತಾ ಹಬ್ಬವನ್ನುಸಂತೋಷದಲ್ಲಿ ಆಚರಿಸುತ ಸಂಭ್ರಮದಲ್ಲಿ ಹಬ್ಬವನ್ನು ಆಚರಿಸಲೆಂದು ಆಶಿಸುತ್ತೇನೆ. ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು ಜೈ ಹಿಂದ್ ಜೈ ಭಾರತ ಮಾತೆ.

**- ಹೆಚ್. ಎಸ್. ಪ್ರತಿಮಾ ಹಾಸನ್**
**ಸಾಹಿತಿ, ಶಿಕ್ಷಕಿ, ಹಾಸನ**

# ಅರಕಲಗೂಡು ತಾಲ್ಲೂಕಿನಾದ್ಯಂತ ಅಕಾಲಿಕ ಮಳೆ ತಂದ ಸಂಕಷ್ಟ

## ಕೆರೆ ಕೋಡಿ ಒಡೆದು ಅಪಾರ ಹಾನಿ | ಶಾಸಕ ಎ.ಮಂಜು ಪರಿಶೀಲನೆ

• ಪ್ರಜೋದಯ ವರದಿ





**ಅರಕಲಗೂಡು:** ತಾಲ್ಲೂಕಿನಾದ್ಯಂತ ಶನಿವಾರ ರಾತ್ರಿ ಸುರಿದ ಅಕಾಲಿಕ ಮಳೆಗೆ ಹಲವು ಗ್ರಾಮಗಳಲ್ಲಿನ ಕೆರೆ ಕೋಡಿ ಒಡೆದು ಕೃಷಿ ಜಮೀನು ಜಲಾವೃತಗೊಂಡಿದ್ದು, ಕೆಲವು ಗ್ರಾಮಗಳ ಸಂಪರ್ಕ ಕೂಡ ಕಡಿತಗೊಂಡಿದೆ.

ಈ ಸಾಲಿನ ಮುಂಗಾರು ಪೂರ್ವ ಮತ್ತು ಮುಂಗಾರು ಹಂಗಾಮಿನಲ್ಲಿ ಬಿದ್ದಿರುವ ಮಳೆಗಿಂತ ಹೆಚ್ಚು ಮಳೆ ಸುರಿದು ದಾಖಲೆ ಸೃಷ್ಟಿಸಿದೆ. ಕಸಬಾ ಹೋಬಳಿ ಸೇರಿ ಕಾವೇರಿ, ಹೇಮಾವತಿ ನದಿ ಮತ್ತು ಹಿನ್ನೀರು, ಏತನೀರಾವರಿ ನಾಲೆ ಗಳ ಮೂಲಕ ಈಗಾಗಲೇ ಕೃಷಿ ಕೈಗೊಳ್ಳಲು ನೀರು ಹರಿಯುತ್ತಿದೆ. ಅದರಿಂದ ಅಚ್ಚುಕಟ್ಟು ಮತ್ತು ನಾಲಾ ವ್ಯಾಪ್ತಿಯ ಬಹುತೇಕ ಕೆರೆಗಳು ತುಂಬಿದ್ದು, ಅತಿಯಾದ ಮಳೆ ನೀರು ಕೆರೆಗಳಿಗೆ ಸಂಗ್ರಹವಾಗಿ ಅನಾಹುತ ಉಂಟಾಗಿದೆ.

ಕಟಾವಿಗೆ ಬಂದಿರುವ ಮೆಕ್ಕೆಜೋಳ ಹಾಗು ಕಟಾವು ಮಾಡಿರುವ ಜೋಳ ಮಳೆಗೆ ಆಹುತಿಯಾಗಿ ರೈತರ ಕಣ್ಣಲ್ಲಿ ನೀರು ತರಿಸಿದೆ. ಈಗಾಗಲೇ ಕೈಗೊಂಡಿರುವ ಕೆರೆ ಅಚ್ಚುಕಟ್ಟು ಪ್ರದೇಶದ ಭತ್ತ ಬೆಳೆ ಕೂಡ ಜಲಾವೃತ ಗೊಂಡಿರುವುದು ಕಂಡುಬದಿದೆ. ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿನ ಫಸಲಿಗೆ ಬಂದಿರುವ ಅಡಿಕೆ, ಬಾಳೆ, ತೆಂಗು, ತರಕಾರಿ ಬೆಳೆ ಮತ್ತು ತೋಟಗಾರಿಕೆ ಬೆಳೆಗಳ ಪ್ರದೇಶಕ್ಕೆ ನೀರು ನುಗ್ಗಿದೆ.

ಬೆಳವಾಡಿ ಗ್ರಾಮದ ಹಿರಿಕೆರೆ ಕೋಡಿ ಒಡೆದು ಅಚ್ಚುಕಟ್ಟು ಪ್ರದೇಶದಲ್ಲಿ ಕೈಗೊಳ್ಳಲಾ ಗಿದ್ದ 80 ಎಕರೆ ಪ್ರದೇಶದ ಭತ್ತ, ಅಡಿಕೆ ಇತರೆ ತೋಟಗಾರಿಕೆ ಬೆಳೆಗಳು ಜಲಾವೃತವಾಗಿವೆ. ಇದೇ ನೀರು ಕೋಟೆ ಕರ್ಪೂರವರವಳ್ಳಿ ಗ್ರಾಮ ದ ಚನ್ನಯ್ಯ ಅವರ ಅಡಿಕೆ ತೋಟಕ್ಕೆ ನುಗ್ಗಿದೆ. ಅದೇ ರೀತಿ ಸೀಬಳ್ಳಿ, ಹಾನಗಲ್ಲು ಗ್ರಾಮದ ರಸ್ತೆ ಮೇಲೆ ಕೆರೆ ನೀರು ಹರಿಯುತ್ತಿರುವ ಪರಿಣಾಮ ರಸ್ತೆ ಸಂಪರ್ಕ ಕಡಿತಗೊಂಡಿದೆ.

ತಾಲ್ಲೂಕಿನ ಮುತ್ತಿಗೆ ಗ್ರಾಮದ ಕೆರೆಗೆ ಅಧಿಕ ಮಳೆ ನೀರು ಸಂಗ್ರಹವಾದ ಹಿನ್ನಲೆ ಕೋಡಿಯಲ್ಲಿ ಭಾರೀ ಪ್ರಮಾಣದ ನೀರು ನುಗ್ಗುತ್ತಿರುವ ಪರಿಣಾಮ ಕೋಡಿ ಅಕ್ಕಪಕ್ಕದ ಕೃಷಿ ಜಮೀನು, ವಾಸದ ಮನೆಗಳಿಗೆ ನೀರು ನುಗ್ಗಿ ಹಾನಿ ಉಂಟುಮಾಡಿದೆ. ನಾಲ್ಕೆದು ವಾಸದ ಮನೆಗಳಿಗೂ ನೀರು ನುಗ್ಗಿದ ಹಿನ್ನಲೆ ಇಡೀ ರಾತ್ರಿ ನಿವಾಸಿಗಳು ಭಯದಿಂದ ನಿದ್ರೆ ಮಾಡಬೇಕಾಯಿತು.

ಅರಕಲಗೂಡು-ಸತೆಮರೂರು ನಡುವಿನ ಪಾರಸನಹಳ್ಳಿ ಗ್ರಾಮದ ಸಮೀಪ ಕೆರೆಕೋಡಿ ನೀರು ರಸ್ತೆ ಮೇಲೆ ಇಡೀ ರಾತ್ರಿ ಭಾರೀ ಪ್ರಮಾಣದಲ್ಲಿ ಹರಿದ ಪರಿಣಾಮ ಸಂಪರ್ಕ ಕೂಡ ಕಡಿತಗೊಂಡಿತ್ತು. ಬೆಳಿಗ್ಗೆ ಜೆಸಿಬಿ ಮೂಲಕ ತೆರವು ಕಾರ್ಯಚರಣೆ ಕೈಗೊಳ್ಳ ಲಾಯಿತು.

ಪಟ್ಟಣದ ದೊಡ್ಡಕೆರೆಗೆ ಭಾರೀ ಪ್ರಮಾಣದ ನೀರು ಹರಿದು ಬರುತ್ತಿರುವ ಪರಿಣಾಮ ಕೆರೆ ಅಪಾಯ ಮಟ್ಟದಿಂದ ಕೂಡಿದೆ. ಕೋಡಿ ಬಿರುಕು ಬಿಟ್ಟಿರುವ ಪರಿಣಾಮ ನಾಲೆಯಲ್ಲಿ ಹರಿಯುವ ನೀರಿನ ರಭಸ ಕಂಡುಬದಿದೆ. ಅದರಿಂದ ಪಟ್ಟಣದ ಗದ್ದೆಬಯಲಿನಲ್ಲಿ ನಿರ್ಮಿಸಿಕೊಂಡಿರುವ ವಾಸದ ಮನೆಗಳಿಗೆ ನೀರು ನುಗ್ಗಿದೆ. ಕೋಡಿ ನೀರು ಅಧಿಕವಾಗಿ ಹರಿಯುತ್ತಿದ್ದು, ಹೆಂಟಗೆರೆ ಕೆರೆ ಕೂಡ ಭರ್ತಿಯಾಗಿದೆ. ಇಲ್ಲಿಂದ ಭಾರೀ ಪ್ರಮಾಣದ ನೀರು ಹರಿಯುತ್ತಿರುವ ಪರಿಣಾಮ ಕಾಶೀಪುರ ಬಳಿಯ ಕೊಲ್ಲಿಯಲ್ಲಿ ಅಧಿಕ ನೀರು ಸಂಗ್ರಹವಾಗಿ ಕೃಷಿ ಜಮೀನ್ನನ್ನು ಆವರಿಸಿಕೊಂಡಿದೆ. ಅಲ್ಲದೆ ನೇಗೆರೆ, ಮರಡಿ ನಡುವಿನ ರಸ್ತೆ ಕೂಡ ಜಲಾವೃತಗೊಂಡಿದೆ.

ತಾಲ್ಲೂಕಿನ ಕತ್ತಿಮಲ್ಲೇಮನಹಳ್ಳಿ ಬಳಿ ಹರಿಯುವ ಅಡಿಕೆಬೊಮ್ಮನಹಳ್ಳಿ ಏತ ನೀರಾವರಿ ನಾಲೆಯಲ್ಲಿ ಹೂಳು ತುಂಬಿಕೊಡಿದ್ದ ಪರಿಣಾಮ ಮಳೆ ನೀರು ಹೆಚ್ಚುವರಿಯಾಗಿ ತುಂಬಿದ ಪರಿಣಾಮ ನೀರು ಮುಂದೆ ಹರಿಯಲು ಸಾಧ್ಯವಾಗದೇ ನಾಲೆಯ ತಡಗೋಡೆಯಿಂದ ಹೊಳ್ಳಿ ಸಮೀಪದ ಸರ್ಕಾರಿ ಪ್ರೌಢ ಶಾಲೆಯ ಕಾಂಪೌಂಡ್ ಉರುಳಿದೆ. ಇಲ್ಲಿಯೂ ರಸ್ತೆಯ ಮೇಲೆ ಅಧಿಕ ನೀರು ಹರಿಯುತ್ತಿರುವ ಪರಿಣಾಮ ಕೃಷಿ ಜಮೀನು ಹಾನಿಯಾಗಿದೆ.

**ಹಾನಿ ಪ್ರದೇಶಕ್ಕೆ ಶಾಸಕ ಭೇಟಿ:** ಅಕಾಲಿಕ ಮಳೆಯಿಂದ ಹಾನಿ ಸಂಭವಿಸಿರುವ ಕೆರೆ ಕೋಡಿ, ಕೃಷಿ ಪ್ರದೇಶಕ್ಕೆ ಶಾಸಕ ಎ.ಮಂಜು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು. ಮುತ್ತಿಗೆ ಕೆರೆಯಲ್ಲಿ ಭಾರೀ ಪ್ರಮಾಣದ ನೀರು ಸಂಗ್ರಹವಾಗಿರುವ ಪರಿಣಾಮ ಕೋಡಿಯಲ್ಲಿ ಹೆಚ್ಚು ನೀರು ಹರಿದು ಕೃಷಿ ಪ್ರದೇಶ, ವಾಸದ ಮನೆಗಳು ಹಾಗು ರಸ್ತೆಗೆ ಹಾನಿಯಾಗಿದೆ. ಇಷ್ಟೊಂದು ಪ್ರಮಾಣದ ನೀರು ಸಣ್ಣ ಪ್ರಮಾಣದ ತೂಬಿನಲ್ಲಿ ಹರಿಯಲು ಸಾಧ್ಯವಿಲ್ಲ. ಕೂಡಲೇ ಈ ರಸ್ತೆಯ ಮಧ್ಯೆ ದೊಡ್ಡದಾದ ಸೇತುವೆ ನಿರ್ಮಿಸಿ ನೀರು ಸರಾಗವಾಗಿ ಸಾಗುವಂತೆ ಕ್ರಮ ವಹಿಸಬೇಕೆಂದು ಪಿಡಬ್ಲೂಡಿ ಇಂಜಿನೀಯರ್‌ಗೆ ದೂರವಾಣಿ ಮೂಲಕ ಸೂಚನೆ ನೀಡಿದರು.

**ಲಭ್ಯವಿರುವ ಪರಿಹಾರ ಕಲ್ಪಿಸಿ:** ಈ ವರ್ಷದಲ್ಲಿ ಅಧಿಕ ಮಳೆ ಶನಿವಾರ ಬಿದ್ದಿದ್ದು, ಕೆರೆಗಳ ಕೋಡಿ ಒಡೆಯಲು ಕಾರಣವಾಗಿದೆ. ಕೂಡಲೇ ಕೋಡಿ ನಿರ್ಮಾಣ, ನೀರು ನುಗ್ಗಿರುವ ಮನೆಗಳು, ಬೆಳೆ ಹಾನಿ ಸಂಭವಿಸಿರುವ ರೈತರಿಗೆ ಲಭ್ಯವಿರುವ ಪರಿಹಾರ ನೀಡಲು ಗಮನಹರಿಸಬೇಕಿದೆ. ಈಗಾಗಲೇ ಬಹುತೇಕ ಕೆರೆಗಳು ಭರ್ತಿಯಾಗಿದ್ದು, ಮುಂದಿನ ದಿನಗಳಲ್ಲಿ ಮಳೆಯ ಪ್ರಮಾಣ ಅಧಿಕಗೊಂಡರೇ ಮತ್ತೊಷ್ಟು ಹಾನಿ ಉಂಟಾಗುವ ಸಾಧ್ಯತೆ ಇದೆ. ಇಂದಿನಿದಲೇ ಸ್ಥಳ ಪರಿಶೀಲನೆ ನಡೆಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಶಾಸಕ ಎ.ಮಂಜು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ತಹಶೀಲ್ದಾರ್. ಉಪ ತಹಶೀಲ್ದಾರ್ ಸಿ. ಸ್ವಾಮಿ ಹಾಗು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್ ಹಾಜರಿದ್ದರು.

**ಮಳೆಯ ವರದಿ:** ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಯಲ್ಲಿ ಅರಕಲಗೂಡು ಕಸಬಾ ವ್ಯಾಪ್ತಿ ಯಲ್ಲಿ 110.1 ಮಿ. ಮೀ., ಮಲ್ಲಿಪಟ್ಟಣ 43, ದೊಡ್ಡಮಗ್ಗೆ 18, ಕೊಣನೂರು 37, ರಾಮನಾಥಪುರ 68, ಬಸವಾಪಟ್ಟಣ 59, ದೊಡ್ಡಬೆಮ್ಮತ್ತಿ ವ್ಯಾಪ್ತಿಯಲ್ಲಿ 48 ಮಿ.ಮೀ. ಮಳೆಯಾಗಿದೆ.

## ದಶದಿನದ ದರ್ಶನೋತ್ಸವ ಭಕ್ತರಿಗೆ ಸುಗಮ

» ಮೊದಲನೇ ಪುಟದಿಂದ



ದರ್ಶನ ಪಡೆದ ಬಳಿಕ ಚಿತ್ರನಟ ಶಿವರಾಜ್‌ಕುಮಾರ್ ಅವರು ಮಾತನಾಡಿ, ಆರ್ಶೀವಾದ ಪಡೆದು ಕೊಳ್ಳಲು ದೇವಿಯೇ ನಮ್ಮನ್ನು ಕರೆಸಿ ಕೊಂಡಿದ್ದಾಳೆ. ಶಾಸಕ ಹೆಚ್.ಪಿ. ಸ್ವರೂಪ್ ಅವರು ಸಹಕಾರದಿಂದ ಉತ್ತಮವಾಗಿ ದರ್ಶನ ಪಡೆದುಕೊಂಡಿ ದ್ದೇವೆ. ಹಾಸನಕ್ಕೆ ಆಗಮಿಸಿ ಬಹಳ ದಿನಗಳಾಗಿತ್ತು, ಇಂದು ಬಂದಿರುವುದು ಖುಷಿ ತರಿಸಿದೆ ಎಂದು ಹೇಳಿದರು.

ನಟ ರಿಷಭ್ ಶೆಟ್ಟಿ ಅವರು ಮಾತನಾಡಿ, ಪ್ರತಿವರ್ಷವೂ ಹಾಸನಾಂಬ ದರ್ಶನ ಆರಂಭವಾ ದಾಗಲೆಲ್ಲ ಹೋಗಬೇಕು ಅಂದುಕೊಂಡರೂ ಆಗುತ್ತಿರಲಿಲ್ಲ. ಈ ಬಾರಿ ಕುಟುಂಬದೊಂದಿಗೆ ದರ್ಶನ ಪಡೆಯುವ ಕಾಲ ಅವಕಾಶ ಸಿಕ್ಕಿದೆ. ದೈವತ್ವ, ದೇವರ ಬಗ್ಗೆ ಅಪಾರ ನಂಬಿಕೆ ಇದೆ. ಅದನ್ನೇ ನಂಬಿ ನಾವು ಸಿನಿಮಾ ಮಾಡಿದ್ದೇವೆ. ದೈವ, ದೇವರ ಆಶೀರ್ವಾದದಿಂದ ಕಾಂತಾರ ದೊಡ್ಡ ಮಟ್ಟದ ಯಶಸ್ಸು ದೊರೆತಿದೆ. ಹೀಗಾಗಿ ದೇವಸ್ಥಾನ, ಅಭಿಮಾನಿಗಳನ್ನು ಭೇಟಿ ಮಾಡುತ್ತಿದ್ದೇವೆ ಎಂದರು.

## ಗೌರವ ಕೇಳುವುದಲ್ಲ, ದುಡಿಮೆ ಮಾಡಿ ಪಡೆಯಬೇಕು

» ಮೊದಲನೇ ಪುಟದಿಂದ

ಜಿಲ್ಲಾಧಿಕಾರಿ ಈ ವರ್ಷ ಇರುತ್ತಾರೆ, ಮುಂದಿನ ವರ್ಷ ಬೇರೆಯವರು ಬರುತ್ತಾರೆ, ಉಸ್ತುವಾರಿ ಸಚಿವರು ಸರ್ಕಾರ ಬದಲಾದರೆ ಬೇರೆಯವರು ಬರುತ್ತಾರೆ. ಆದರೆ, 5 ವರ್ಷಗಳ ಕಾಲಕ್ಕೆ ಹಾಸನ ಕ್ಷೇತ್ರವನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಸ್ಥಳೀಯ ಶಾಸಕರು ಹೊರಬೇಕು ಎಂದರು.

ಸಂಜೀವಿನಿ ಆಸ್ಪತ್ರೆ ಸಂಬಂಧ ನಿಮ್ಮ ವೈಯಕ್ತಿಕ ಕೆಲಸ ಆಗಬೇಕೆಂದಾಗ ಎಲ್ಲಾ ಮಂತ್ರಿಗಳ ಹತ್ತಿರ ಹೋಗುತ್ತೀರಿ. ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಏಕೆ ಆ ಆಸಕ್ತಿ ತೋರಲಿಲ್ಲ. ಪ್ರತಿಭಟನೆ ನಡೆಸುವ ಮೊದಲು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಿ. ಅತಿಥಿಯಾಗಿ ಪಾಲ್ಗೊಂಡು ಈಗ ಗೌರವ ಕೊಡುತ್ತಿಲ್ಲ ಎಂದು ಆರೋಪ ಮಾಡುವುದರಲ್ಲಿ ಅರ್ಥವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಬೆಳಿಗ್ಗೆ-ರಾತ್ರಿ ಎನ್ನದೆ ದೇವಸ್ಥಾನದಲ್ಲೇ ನಿಂತು ಕೆಲಸ ಮಾಡುತ್ತಿದ್ದಾರೆ. ನೀವು ಯಾವ ಭಕ್ತರನ್ನು ಮಾತನಾಡಿಸಿ ಸಮಸ್ಯೆ ಕೇಳಿದ್ದೀರಿ ಎಂದು ಪ್ರಶ್ನಿಸಿದರು.

ಶಾಸಕರಿಗೆ ಹಾಸನಾಂಬ ಜಾತ್ರಾ ಮಹೋತ್ಸವ ಹೇಗೆ ನಡೆಯುತ್ತದೆ ಎಂಬುದೇ ಗೊತ್ತಿಲ್ಲ. ಅವರ ತಂದೆ ಹಾಗು ಪಕ್ಷದ ಶಕ್ತಿಯಿಂದ ಶಾಸಕರಾಗಿದ್ದಾರೆ. ಇನ್ನೂ ಸಮಯ ಇದೆ ನಿಮ್ಮ ಜವಾಬ್ದಾರಿ ಅರಿತುಕೊಳ್ಳಿ. ಯಾವ ಪುರುಷಾರ್ಥಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆ. ಶಾಸಕರು ಸಾವಿರ ಪಾಸ್ ಪಡೆದಿದ್ದಾರೆ. ಅಗೌರವಾಗಿದ್ದರೆ ಗೋಲ್ಡ್ ಪಾಸ್ ಬೇಡವೆಂದು ಹೇಳಬೇಕಿತ್ತು. ವಿದೇಶ ಪ್ರವಾಸಕ್ಕೆ ಹೋಗುವ ಬದಲು ತಾವೇ ಮುನ್ನೆಡೆಸಿದ್ದರೆ ಇದು ಆಗುತ್ತಿರಲಿಲ್ಲ. ಮುಂದೆ ಜವಾಬ್ದಾರಿ ಅರಿತು ಶಾಸಕರಾಗಿ ಕೆಲಸ ನಿರ್ವಹಿಸುವ ಮೂಲಕ ಹಾಸನದ ಗೌರವ ಹೆಚ್ಚಿಸಬೇಕು. ಜಿಲ್ಲಾಧಿಕಾರಿಯಿಂದ ಹೇಗೆ ಕೆಲಸ ಮಾಡಬೇಕು ಎನ್ನುವ ಚಾಕಚಕ್ಯತೆ ಬೆಳೆಸಿಕೊಳ್ಳಿ ಎಂದು ವಾಗ್ದಾಳಿ ನಡೆಸಿದರು.

## ಹೇಗೆ ವರ್ತಿಸಬೇಕೆಂದು ಹೇಳಿಸಿಕೊಳ್ಳುವ ಅಗತ್ಯ ನನಗಿಲ್ಲ

» ಮೊದಲನೇ ಪುಟದಿಂದ

ಪರ ಕೆಲಸ ಮಾಡಿದ್ದಾರೆ ಬಹಿರಂಗ ಪಡಿಸಲಿ. ದೇವಸ್ಥಾನದ ಬಗ್ಗೆ ಮಾತನಾಡುವುದಿಲ್ಲ. ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಒಳ್ಳೆಯ ಕೆಲಸ ಮಾಡಿದ್ದಾರೆ. ಜಾತ್ರಾ ಮಹೋತ್ಸವದ ವೇಳೆ ಐದಾರು ಬಾರಿ ಬಂದು ಸಾರ್ವಜನಿಕರ ಕುಂದುಕೊರತೆ ಆಲಿಸಿದ್ದೇನೆ ಎಂದರು. ನಾನು 24 ಗಂಟೆ ಬಂದು ದೇವರ ಎದುರು ಕಾಲು ಮೇಲೆ ಕಾಲು ಹಾಕಂಡು ಕೂರುತ್ತಿಲ್ಲ. ಅವರು ಶಾಸಕರಾಗಿದ್ದಾಗ ವೇಳೆ ದೇವರ ಮುಂದೆ ಕುಳಿತು ಯಾರು ಬೇಕು, ಯಾರು ಬೇಡ ಎಂದು ಬಿಡಿಸುವ ಕೆಲಸ ನಾನು ಮಾಡಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಕುಳಿತರೆ ಗರ್ಭ ಗುಡಿಗೆ ಬಿಡಿಸಿ ಎಂದು ಒತ್ತಡ ಇರುತ್ತದೆ. ನಾನು ಪ್ರೋಟೋಕಾಲ್ ವಾಹನದಲ್ಲಿ ಬೇರೆಯ ವರನ್ನು ಕಳುಹಿಸುವ ಕೆಲಸ ಮಾಡಿಲ್ಲ. ಅವರು ಶಾಸಕರಾದಾಗ ಗರ್ಭಗುಡಿ ಎದುರು 24 ಗಂಟೆ ಕೂರುವಂತಹ ಕೆಲಸ ನಾನು ಮಾಡಿಲ್ಲ. ನನಗೆ ಗೌರವ, ದೇವರ ಮೇಲೆ ಭಕ್ತಿ ಇದೆ. ನಾನು ಯಾರ ಹತ್ತಿರನೂ ಕೆಲಸ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ತಿಳಿಸಿದರು.

## ಕಾನೂನು ಪಾಲಿಸದ ವರಟು ವಾದಕ್ಕೆ ಬೆಲೆ ಇಲ್ಲ

» ಮೊದಲನೇ ಪುಟದಿಂದ

ಅವರು, ಮುಸ್ಲಿಮರು ವರ್ಷದಲ್ಲಿ ಒಂದು ದಿನ ರಂಜಾನ್ ಹಬ್ಬದಂದು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸುವುದು ನಡೆದು ಕೊಂಡು ಬಂದಿರುವ ಸಂಪ್ರಾದಾಯ. ಪ್ರತಿದಿನ ಮಾಡಿದೆ ಮಾಡಿದರೆ ಪ್ರಶ್ನೆ ಮಾಡಬಹುದು. ಉಳಿದ ದಿನ ಮಸೀದಿಯಲ್ಲೇ ನಮಾಜ್ ಮಾಡು ವುದರಿಂದ ಈ ವ್ಯಾಖ್ಯಾನ ಸರಿಯಲ್ಲ. ಯಾವುದೇ ವಿಷಯದ ಬಗ್ಗೆ ಪ್ರಶ್ನೆ ಮಾಡಿದರ ನಂತರ ಕಾನೂನು, ಕಾಯ್ದೆ ಮಾಡ ಬೇಕಾಯುತ್ತದೆ. ಆ ಬಗ್ಗೆಯೂ ಪರಿ ಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಆರ್‌ಎಸ್‌ಎಸ್ ಸಮಾರಂಭದಲ್ಲಿ ಭಾಗಿಯಾದ ಪಿಡಿಒ ಅಮಾನತು ಗೊಳಿಸಿರುವ ಬಗ್ಗೆ ಪ್ರತಿ ಕ್ರಿಯಿಸಿ, ವೈಯಕ್ತಿಕ ವಿಚಾರವನ್ನು ಪ್ರಶ್ನೆ ಮಾಡುವಂತ್ತಿಲ್ಲ. ಆದರೆ, ಒಂದು ಹಿಡನ್ ಅಜೆಂಡ ಇರುವ ಸಂಘಟನೆಯೊಂದಿಗೆ ಸೇರಿಕೊಳ್ಳುವುದಾದರೆ, ಅದನ್ನು ಸರ್ಕಾರಿ ನೌಕರ ಬೆಂಬಲಿ ಸುತ್ತಾನೆ ಎನ್ನುವುದಾದರೆ ಪ್ರಶ್ನಿಸ ಬೇಕೋ ಬೇಡವೋ. ಸರ್ಕಾರಿ ನಿಯಮದಲ್ಲಿ ಕೆಲಸ ಮಾಡುವ ಅವನು, ತಾರತಮ್ಯ ನೀತಿ ಅನುಸರಿಸುವುದಿ ಲ್ಲವೆಂದು ಹೇಗೆ ನಂಬುದುವು ಎಂದು ಪ್ರಶ್ನಿಸಿದರು.

ಈ ದೇಶದ ಪ್ರಧಾನಿ ಒಂದು ದಿನವೂ ಮಾಧ್ಯಮದವರ ಪ್ರಶ್ನೆ ಎದುರಿಸಲು ಸಾಧ್ಯವಾಗಿಲ್ಲ. ಈ ರಾಷ್ಟ್ರವನ್ನು ಉದ್ದೇಶಿಸಿ ಮಾಧ್ಯಮಗಳನ್ನು ಎದುರಿಸಲು ಅವರಿಗೇನು ತೊಂದರೆ ಎಂದು ಪ್ರಶ್ನಿಸಿದ ಅವರು, ಎಲ್ಲವನ್ನು ನಮ್ಮನ್ನೇ ಕೇಳುತ್ತೀರಿ, ನಮಗೆ ಉತ್ತರ ನೀಡುವ ಶಕ್ತಿ ಇದೆ ಎಂದರು.

## ಕಾರಿನಲ್ಲಿ ಹಸುಗಳ ಅಕ್ರಮ ಸಾಗಾಟ



**ಸಕಲೇಶಪುರ:** ಜನರನ್ನು ಹೊತ್ತೊಯ್ಯುವ ಕಾರಿನಲ್ಲಿ ಅಕ್ರಮವಾಗಿ ಗೋವು ಸಾಗಿಸುತ್ತಿದ್ದ ಪ್ರಕರಣ ಬೇಧಿಸಿರುವ ಹಿಂದೂಪರ ಸಂಘಟನೆ ಕಾರ್ಯಕರ್ತರು ನಾಲ್ಕು ಹಸುಗಳನ್ನು ರಕ್ಷಿಸಿದ್ದಾರೆ. ತಾಲ್ಲೂಕಿನ ಮಾರನಹಳ್ಳಿ ಸಮೀಪ ಭಾನುವಾರ ಬೆಳಿಗ್ಗೆ 5.30ರ ಸಮಯದಲ್ಲಿ ಕಾರನ್ನು ಬೆನ್ನಟ್ಟಿದಾಗ ಚಾಲಕನು ವಿದ್ಯುತ್ ಕಂಬಕ್ಕೆ ಡಿಕ್ಕಿ ಮಾಡಿ ಅಲ್ಲಿಂದ ಪರಾರಿಯಾಗಿದ್ದಾನೆ.

ನಂಬರ್ ಪ್ಲೇಟ್ ಇಲ್ಲದ ಕಾರು ಸಕಲೇಶಪುರದಿಂದ ಮಂಗಳೂರು ಕಡೆಗೆ ಹೋಗುತ್ತಿತ್ತು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಕಾರು ಹಾಗು ಹಸುಗಳನ್ನು ವಶಕ್ಕೆ ಪಡೆದರು.

# ಜಿಲ್ಲಾಡಳಿತ ವಿರುದ್ಧ ಜೆಡಿಎಸ್ ಭಾರೀ ಪ್ರತಿಭಟನೆ

» ಮೊದಲನೇ ಪುಟದಿಂದ

ಜಾತ್ರಾ ಮಹೋತ್ಸವದಲ್ಲಿ ಹೀಗೆ ಆಗಿತ್ತು. ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ಬಹಿರಂಗ ಕ್ಷಮೆ ಕೇಳುವ ವರೆಗೆ ಪ್ರತಿಭಟನೆ ವಾಪಾಸ್ ಪಡೆಯುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಕೆ.ಎಸ್.ಲತಾಕುಮಾರಿ ಜಿಲ್ಲಾಧಿಕಾರಿಯಾಗಿ ಜಿಲ್ಲೆಗೆ ಬಂದಿದ್ದಾರೆಯಾದರೂ ಗುಮಾಸ್ತೆ ರೀತಿ ಕೆಲಸ ಮಾಡುತ್ತಿದ್ದಾರೆ. ಮೈಕ್ ಹಿಡಿದು ಜನರ ನಿಯಂತ್ರಿಸಲು ಬೇರೆ ಸಿಬ್ಬಂದಿ ಇದ್ದಾರೆ. ನೀವು ಮಾಡಬೇಕಾದ ಕೆಲಸ ಬೇರೆ ಇದೆ. ಅದನ್ನು ಮೊದಲು ಮಾಡುವುದನ್ನು ಕಲಿಯಿರಿ. ಕಳೆದ 15 ದಿನಗಳಲ್ಲಿಂದ ಜಿಲ್ಲೆಯ ಆಡಳಿತ ಸಂಪೂರ್ಣ ನಿಷ್ಕ್ರಿಯವಾಗಿದೆ. ಯಾವ ಕಚೇರಿಗೆ ಹೋದರು ಅಧಿಕಾರಿಗಳಿಲ್ಲ. ಎಲ್ಲರನ್ನೂ ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ನಿಯೋಜಿಸಲಾಗಿದೆ. ಶಾಸಕ ಹೆಚ್.ಪಿ. ಸ್ವರೂಪ್ ಅವರಿಗೆ ಅವಮಾನ ಮಾಡಲಾಗಿದೆ. ಶಾಸಕರ ಸಲಹೆ ಸೂಚನೆ ಮೇರೆಗೆ ಕೆಲಸ ನಡೆಯಬೇಕು. ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಅರ್ಹತೆಗೆ ತಕ್ಕ ಕೆಲಸ ಮಾಡಬೇಕು. ಹಾಸನದಲ್ಲಿ ಮೈಕ್ ಹಿಡಿದು ಅನೌನ್ಸ್ ಮಾಡುವ ಬದಲು ಬೆಂಗಳೂರಿನ ರಸ್ತೆ ಗುಂಡಿ ಮುಚ್ಚ ಬೇಕು. ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಬಂದಿದ್ದಾಗ ತಾವೂ ಹಾಜರಿದ್ದು ಸ್ವಾಗತಿಸಿದ್ದರೆ ಒಳ್ಳೆಯ ರಾಜಕೀಯ ವಾತಾವರಣ ಸೃಷ್ಟಿಸಬಹುದಿತ್ತು. ಹಾಸನಾಂಬ ತಾಯಿಗೆ ರಾಜಕೀಯ ಸೋಂಕಿಲ್ಲ. ಪಾಸ್ ವಿತರಣೆ, ಗಣ್ಯರಿಗೆ ಗೌರವ ವಿಚಾರದಲ್ಲಿ ಪಕ್ಷಪಾತ ಮಾಡಲಾಗಿದೆ. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಜಿಲ್ಲೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದಾರೆ. ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಅನುದಾನ ಕೊಟ್ಟಿದ್ದು ಬಿಟ್ಟರೆ ಕಾಂಗ್ರೆಸ್ ಹಾಸನಾಂಬ ದೇವಸ್ಥಾನಕ್ಕೆ ಅನುದಾನ ಕೊಟ್ಟಿದೆಯೇ ಎಂದು ಪ್ರಶ್ನಿಸಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ಹರಿಕಾರ ಹೆಚ್.ಡಿ.ಕುಮಾರಸ್ವಾಮಿ ಅವರು ಭೇಟಿ ನೀಡಿದಾಗ ಜಿಲ್ಲಾಡಳಿತ ಶಿಷ್ಟಾಚಾರ ಪಾಲಿಸಿಲ್ಲ. ಹಾಸನಾಂಬ ಜಾತ್ರೆಗೆ ಅಪಚಾರ ಮಾಡ ಬಾರದೆಂದು ಸುಮ್ಮನಿದ್ದೇವೆ. ಸೌಜನ್ಯಕ್ಕಾದರೂ ಸಚಿವರನ್ನು ಗೌರವಿಸಬೇಕಿತ್ತು. ಕಳೆದ ಶುಕ್ರವಾರ ಆಗಿರುವ ಲೋಪಕ್ಕೆ ಉತ್ತರ ಕೊಡಬೇಕು. ಈ ಲೋಪದ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆಯೆಂಬ ಅನುಮಾನ ನಮ್ಮನ್ನು ಕಾಡುತ್ತಿದೆಯೆಂದರು.

**ಸ್ಥಳದಲ್ಲಿ ಬಿಗುವಿನ ವಾತಾವರಣ**

ಜಿಲ್ಲಾಧಿಕಾರಿ ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದು ಆರಂಭವಾದ ಪ್ರತಿಭಟನೆ ಕೆಲವೇ ಸಮಯದಲ್ಲಿ ಗಂಭೀರ ಸ್ವರೂಪ ಪಡೆದು ಪೊಲೀಸರನ್ನು ಆತಂಕಕ್ಕೆ ದೂಡಿತು. ಪ್ರತಿಭಟನೆ ಮಧ್ಯೆಯೇ ಶಿಷ್ಟಾಚಾರ ವಾಹನಗಳನ್ನು ಬರುತ್ತಿ ರುವುದನ್ನು ಖಂಡಿಸಿದ ಜೆಡಿಎಸ್ ಕಾರ್ಯ ಕರ್ತರು ಅವುಗಳನ್ನು ತಡೆಯಲು ಬ್ಯಾರಿಕೇಡ್ ತಳ್ಳಿ ನುಗ್ಗಲು ಪ್ರಯತ್ನಿಸಿದರು. ಮತ್ತೊಂದು ಬದಿಯಿಂದ ಪ್ರತಿಭಟನಾಕಾರರನ್ನು ತಡೆಯಲು ಪೊಲೀಸರು ಹರಸಾಹಸಪಟ್ಟರು. ಪರಿಸ್ಥಿತಿ ಕೈ ಮೀರುವುದನ್ನು ಅರಿತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿದರು. ಗಂಟೆಗೂ ಹೆಚ್ಚು ಸಮಯ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

ಹಾಸನಾಂಬ ದರ್ಶನಕ್ಕೆ ಬಂದಿದ್ದ ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡರಿಗೂ ಪ್ರತಿಭಟನೆ ಬಿಸಿ ತಟ್ಟಿತು. ಮುಖ್ಯ ರಸ್ತೆಯಲ್ಲಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟಿಸುತ್ತಿರುವ ವಿಚಾರ ತಿಳಿಯದೆ ಬಂದ ಅವರು ಮಾರ್ಗಮಧ್ಯೆಯೇ ಕಾರಿನಿಂದಿಳಿದು ಗೋಲ್ಡನ್ ಪಾಸ್ ಸರದಿ ಸಾಲಿನಲ್ಲಿ ತೆರಳಿದರು. ಮಧ್ಯಾಹ್ನ ದೇವಾಲಯದಿಂದ ತೆರಳುತ್ತಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಶಾಸಕ ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮುಖ್ಯ ದ್ವಾರದ ಬದಲು ಗೋಲ್ಡನ್ ಪಾಸ್ ಸಾಲಿನಲ್ಲೇ ಕಾಲ್ನಡಿಗೆಯಲ್ಲಿ ಬಂದು ಕಾರು ಹತ್ತಿದರು.

**ಛತ್ರಿ ಆಶ್ರಯ ತ್ಯಜಿಸಿದ ಸ್ವರೂಪ್**

ಒಬ್ಬನೇ ಇಲ್ಲೇ ಮಲಗುವುದಾದರೂ ಸರಿ ಜಿಲ್ಲಾಧಿಕಾರಿ ಬರುವ ವರೆಗೆ ಸ್ಥಳದಿಂದ ಕದಲುವುದಿಲ್ಲವೆಂಬ ಹಠ ಪೊಲೀಸರನ್ನು ಇಕ್ಕಟ್ಟಿಗೆ ಸಿಲುಕಿಸಿತು. ವಿಧಾನಸಭೆಯಲ್ಲಿ ಜಿಲ್ಲಾಧಿಕಾರಿ ವಿರುದ್ಧ ಹಕ್ಕುಚ್ಯುತಿ ಮಂಡಿಸಬೇಕು. ಸ್ಥಳಕ್ಕೆ ಅವರು ಬಾರದಿದ್ದರೆ ನಿಮ್ಮ ವಿರುದ್ಧ ಮಂಡಿಸಬೇಕಾ ಎಂದು ಪೊಲೀಸ್ ವರಿಷ್ಟಾಧಿಕಾರಿ ಹಾಗು ಉಪ ವಿಭಾಗಾಧಿಕಾರಿ ವಿರುದ್ಧ ಗುಡುಗಿದರು. ಸಂಧಾನ ವಿಫಲವಾದ್ದರಿಂದ ಅಧಿಕಾರಿಗಳು ವಾಪಾಸ್ಸಾದ ಕೆಲವೇ ಸಮಯದಲ್ಲಿ ಜೋರು ಮಳೆ ಪ್ರಾರಂಭವಾಯಿತು. ಆಗ ಟೆಂಟ್ ಒಳಗೆ ಬರುವಂತೆ ಶಾಸಕರನ್ನು ಪೊಲೀಸರು ಆಹ್ವಾನಿಸಿದರಾದರೂ ಸ್ವರೂಪ್ ಬರಲಿಲ್ಲ. ಮಳೆಯಲ್ಲೇ ಕಾರ್ಯಕರ್ತರೊಂದಿಗೆ ನಿಂತರು. ಕೊಡಗು ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಹಾಗು ಹಾಸನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್‌ನಾಯ್ಡು ಎಷ್ಟೇ ಮನವಿ ಮಾಡಿದರೂ ಶಾಸಕರು ಸ್ಥಳದಿಂದ ಕದಲಲಿಲ್ಲ. ಮಳೆ ಯಿಂದ ರಕ್ಷಣೆ ಪಡೆಯಲು ಛತ್ರಿ ನೀಡಿದರೂ ನಿರಾಕರಿಸಿದರು. ಪ್ರತಿಭಟನೆ ಮುಂದುವರಿಯುವ ಸಾಧ್ಯತೆ ಹೆಚ್ಚಾದ್ದರಿಂದ ತಕ್ಷಣವೇ ಶಾಮಿಯಾನ ಸಹ ಹಾಕಲಾಯಿತು. ಪಾಲಿಕೆ ಮೇಯರ್ ಗಿರೀಶ್ ಚನ್ನವೀರಪ್ಪ, ಸದಸ್ಯ ವಾಸುದೇವ್, ಕ್ರಾಂತಿ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್. ದ್ಯಾವೇಗೌಡ, ಕೆ.ಎಸ್.ಮಂಜೇಗೌಡ, ರಘು ಮತ್ತಿತರರಿದ್ದರು.

## ಅನಾಹುತ ಸಂಭವಿಸಿದರೆ ಪೊಲೀಸ್ ಇಲಾಖೆ ಜವಾಬ್ದಾರಿಯಲ್ಲ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದು ವಿಶೇಷ ಬಸ್‌ಗಳ ಸಂಚಾರ ನಿಷೇಧಿಸಬೇಕು, ಒಂದು ವೇಳೆ ಜನದಟ್ಟಣೆ ಹೆಚ್ಚಾಗಿ ಕಾಲ್ತುಳಿತ ಸಂಭವಿಸಿದರೆ ಪೊಲೀಸ್ ಇಲಾಖೆ ಜವಾಬ್ದಾರಿಯಲ್ಲವೆಂದು ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಮೊಹಮ್ಮದ್ ಸುಜೀತಾ ಸ್ಪಷ್ಟಪಡಿಸಿದ್ದಾರೆ.

ಶಕ್ತಿದೇವತೆ ಹಾಸನಾಂಬ ದರ್ಶನೋತ್ಸವಕ್ಕೆ ನಿತ್ಯ ಲಕ್ಷಾಂತರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆ. ಶಕ್ತಿ ಯೋಜನೆಯಿಂದ ನಾಡಿನ ಮೂಲೆ ಮೂಲೆಗಳಿಂದ ಮಹಿಳಾ ಭಕ್ತರು ದಾಂಗುಡಿ ಇಡುತ್ತಿದ್ದಾರೆ. ಸರದಿ ಸಾಲಿನಲ್ಲಿ ಸಹಸ್ರಾರು ಭಕ್ತರು ನಿಲ್ಲುತ್ತಿರುವುದರಿಂದ ಪರಿಸ್ಥಿತಿ ಕೈ ಮೀರುವ ಹಂತ ತಲುಪಿದೆ. ಈ ಹಿನ್ನಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ವಾಸ್ತವ ಪರಿಸ್ಥಿತಿಯನ್ನು ಜಿಲ್ಲಾಧಿಕಾರಿ ಗಮನಕ್ಕೆ ತಂದಿದ್ದಾರೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಹೊರ ಜಿಲ್ಲೆಯ ಬಸ್‌ಗಳ ಸಂಚಾರ ನಿಲ್ಲಿಸಬೇಕು. ದೇವರ ದರ್ಶನಕ್ಕಾಗಿ ಕಲ್ಪಿಸಿರುವ ಸ್ಥಳಾವಕಾಶ ಸಾಕಾಗದೆ, ಸಾಮಾನ್ಯ ಹಾಗು ವಿಶೇಷ ದರ್ಶನ ಸರದಿ ಸಾಲುಗಳು ಮೂರರಿಂದ 4 ಕಿ.ಮೀ. ದೂರದವರೆಗೆ ಹಾಸನ ನಗರದ ಪ್ರಮುಖ ರಸ್ತೆಗಳಲ್ಲಿ ವಿಸ್ತರಿಸಿವೆ. ದೀಪಾವಳಿ ಹಬ್ಬದ ಹಿನ್ನಲೆಯಲ್ಲಿ ದೀರ್ಘ ರಜೆಗಳಿರುವು ದರಿಂದ ಭಕ್ತರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಹಾಸನ ನಗರ ಚಿಕ್ಕದಾಗಿದ್ದು, ದೇವಸ್ಥಾನದ ಸುತ್ತಮುತ್ತ ಸ್ಥಳಾವಕಾಶ ಸೀಮಿತವಾಗಿರುವುದರಿಂದ ಜನಸಂದಣಿ ನಿಯಂತ್ರಣ ದೊಡ್ಡ ಸವಾಲಾಗಿದೆ.

ಹೊರ ಜಿಲ್ಲೆಗಳಿಂದ ಕೆಎಸ್‌ಆರ್‌ಟಿಸಿ ಬಸ್‌ಗಳು ಮತ್ತು ಖಾಸಗಿ ವಾಹನಗಳಲ್ಲಿ ಆಗಮಿಸುವ ಭಕ್ತರನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವಂತೆ ವಿನಂತಿಸಿದ್ದಾರೆ. ಭಕ್ತರ ಸಂಖ್ಯೆಯನ್ನು ನಿಯಂತ್ರಿಸದಿದ್ದಲ್ಲಿ ಸಾಲುಗಳಲ್ಲಿ ನೂಕುನುಗ್ಗಲು ಹಾಗು ಕಾಲ್ತುಳಿತದಂತಹ ಅಹಿತಕರ ಘಟನೆ ಸಂಭವ ಹೆಚ್ಚಿದೆ. ಒಂದು ವೇಳೆ ಅಂತಹ ಅಚಾತುರ್ಯಗಳು ಸಂಭವಿಸಿದರೆ ಪೊಲೀಸ್ ಇಲಾಖೆ ಜವಾಬ್ದಾರಿಯಲ್ಲವೆಂದು ಅವರು ಹೇಳಿದ್ದಾರೆ.

## ವಾಲಿಬಾಲ್ ಆಟಗಾರರಿಗೆ ತರಬೇತಿ ನೀಡಲು ಸಿದ್ಧತೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವಾಲಿಬಾಲ್ ಪಂದ್ಯಾವಳಿ ಆಯೋಜಿಸಿ ಉತ್ತಮ ಆಟಗಾರರನ್ನು ಗುರುತಿಸಿ ಉತ್ತಮ ತರಬೇತಿ ನೀಡುವ ಗುರಿ ಹಾಕಿಕೊಳ್ಳಲಾಗಿದೆಯೆಂದು ರಾಜ್ಯ ವಾಲಿಬಾಲ್ ಅಸೋಸಿಯೇಷನ್‌ನ ಹಿರಿಯ ವಾಲಿಬಾಲ್ ಆಟಗಾರ ರಾಮಕೃಷ್ಣೇಗೌಡ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆಯಲ್ಲಿ ಜಿಲ್ಲಾ ಮಟ್ಟದ ಪಂದ್ಯಾವಳಿ ಆಯೋಜಿಸುವ ಹಿನ್ನಲೆಯಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ವಾಲಿಬಾಲ್‌ನಲ್ಲಿ ಸಾಧನೆ ಮಾಡಿದ ಆಟಗಾರರಿಗೂ ಎಲ್ಲಾ ಕ್ರೀಡಾಪಟುಗಳಿಗೆ ಸಿಗುವ ಗೌರವ ಮತ್ತು ಸರ್ಕಾರಿ ಸೌಲಭ್ಯ ದೊರೆ ಯುತ್ತವೆ. ಅದನ್ನು ಯುವ ಆಟಗಾರರಿಗೆ ತಿಳಿಸಬೇಕೆಂದರು.

ಜೂನಿಯರ್, ಸಬ್ ಜೂನಿಯರ್, ಸೀನಿಯರ್ ಸೇರಿ ಹಲವು ಹಂತದ ಪಂದ್ಯಾವಳಿ ಆಯೋಜಿಸಲಾಗುವುದು. ಅದರಿಂದ ಉತ್ತಮ ಆಟಗಾರರನ್ನು ಆಯ್ಕೆ ಮಾಡಿ, ಅವರಿಗೆ ರಾಜ್ಯ ಮಟ್ಟದಲ್ಲಿ ಉತ್ತಮ ತರಬೇತಿ ನೀಡಿ ರಾಷ್ಟ್ರ ಮಟ್ಟದ ತಂಡಕ್ಕೆ ಆಯ್ಕೆ ಮಾಡುವಾಗ ಅನುಸರಿಸುವ ಕ್ರಮಗಳನ್ನು ತಿಳಿಸಲಾಗುವುದೆಂದರು.

ಜಿಲ್ಲಾ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷ ಎಂ.ಜೆ.ಪರಮೇಶ್ ಅವರು ಮಾತನಾಡಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸ್ಪರ್ಧಿಸಿದ್ದ ಜಿಲ್ಲೆಯ ಆಟಗಾರರನ್ನು ಆಹ್ವಾನಿಸಿ ಅವರಿಂದ ತರಬೇತಿ ಮತ್ತು ಮಾರ್ಗದರ್ಶನವನ್ನು ಯುವ ಆಟಗಾರರಿಗೆ ಕೊಡಿಸಲಾಗುವುದು. ಜಿಲ್ಲೆಯ ಜನಪ್ರತಿನಿಧಿಗಳು, ಎಲ್ಲಾ ಸಂಘ ಸಂಸ್ಥೆಯವರು ಪಂದ್ಯಾವಳಿ ಯಶಸ್ಸಿಗೆ ಸಹಕಾರ ನೀಡಬೇಕೆಂದರು.

ರಾಜ್ಯ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷ ಆರ್.ಹರ್ಷ, ಕಾರ್ಯದರ್ಶಿ ಎಲ್.ಪಿ. ಆಂಟೋನಿ, ಜಿಲ್ಲಾ ಕಾರ್ಯದರ್ಶಿ ಟಿ.ಅರುಣ್ ಕುಮಾರ್ ಹಾಗು ಇತರರಿದ್ದರು.

## ಟಿಪ್ಪರ್ ಡಿಕ್ಕಿ: ಯುವಕ ಸಾವು

**ಬೇಲೂರು:** ಅಶೋಕ್ ಲೈಲ್ಯಾಂಡ್ ಟಿಪ್ಪರ್ ಹಿಮ್ಮುಖವಾಗಿ ಚಲಿಸುತ್ತಿದ್ದಾಗ ಡಿಕ್ಕಿಯಾಗಿ ಯುವಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ದೊಡ್ಡ ಸಾಲವಾರ ಸ್ಟೋನ್ ಕ್ರಷರ್‌ನಲ್ಲಿ ಶನಿವಾರ ಸಂಭವಿಸಿದೆ. ಜಾವಗಲ್ ಹೋಬಳಿ ಕೋಳಗುಂದ ಗ್ರಾಮದ ದರ್ಶನ್ (30) ಮೃತ ದುರ್ದೈವಿ.

ನಾಗರಾಜೇಗೌಡ ಅವರಿಗೆ ಸೇರಿದ ಕ್ರಷರ್‌ನಲ್ಲಿ ಕಳೆದ ಒಂದು ವರ್ಷದಿಂದ ದರ್ಶನ್ ಕೆಲಸ ಮಾಡಿಕೊಂಡಿದ್ದ. ಶನಿವಾರ ಸಂಜೆ 4ರ ಸಮಯದಲ್ಲಿ ಟಿಪ್ಪರ್ ಅನ್ನು ಚಾಲಕ ಹಿಮ್ಮುಖವಾಗಿ ಚಲಿಸುತ್ತಿದ್ದಾಗ ದರ್ಶನ್ ಮಾರ್ಗ ಹೇಳುತ್ತಿದ್ದ. ಚಾಲಕನ ನಿಯಂತ್ರಣ ತಪ್ಪಿ ವಾಹನ ದೇಹದ ಮೇಲೆ ಹರಿದಿದೆ. ಗಂಭೀರ ಗಾಯ ಗೊಂಡಿದ್ದ ಯುವಕನನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಟ್ಟೆಮನೆ ಸೇವಾ ಪ್ರತಿಷ್ಠಾನದಿಂದ ರಕ್ತದಾನ ಶಿಬಿರ



**ಹಾಸನ:** ತಣ್ಣೀರುಹಳ್ಳದ ಕಟ್ಟೆಮನೆ ಸೇವಾ ಪ್ರತಿಷ್ಠಾನದಿಂದ ಭಾನುವಾರ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಕಟ್ಟೆಮನೆ ಸದಸ್ಯರಾದ ದಿ|| ಶಿವರುದ್ರಯ್ಯ, ನಾರಾಯಣ, ಸಿದ್ದಲಿಂಗಪ್ಪ ಅವರ ಸ್ಮರಣಾರ್ಥ ಪ್ರತಿ ವರ್ಷ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗುತ್ತದೆ. ಕಾರ್ಯಕ್ರಮ ಅಂಗವಾಗಿ ತಣ್ಣೀರುಹಳ್ಳ ಬಡಾ ವಣೆಯ ಪ್ರಮುಖ ಬೀದಿಗಳಲ್ಲಿ ರಕ್ತದಾನ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು. ಕಟ್ಟೆಮನೆ ಸದಸ್ಯರು ಹಾಗು ಬಂಧು ಮಿತ್ರರು ಸೇರಿ 30 ಮಂದಿ ರಕ್ತದಾನ ಮಾಡಿದರು.

ಕಟ್ಟೆಮನೆ ಸೇವಾ ಪ್ರತಿಷ್ಠಾನದ ಜ್ಞಾನೇಶ್ವರ, ಲಕ್ಷ್ಮೀಕಾಂತ್, ಮೋಹನ ಕುಮಾರ್, ಧರ್ಮಪ್ರಕಾಶ್ ಚಂದನ್, ಗೀತಾ ನಂದಕಿಶೋರ್, ಶೈಲಾ ಭಾನುಪ್ರಕಾಶ್, ರಶ್ಮಿತಾ ಪ್ರದೀಪ್ ಇತರರಿದ್ದರು.

## ಜಾತಿಗಣತಿ ಅ.31ರವರೆಗೆ ವಿಸ್ತರಣೆ ಮಾಡಿದ ಸರ್ಕಾರ

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯದಲ್ಲಿ ಕೈಗೊಳ್ಳಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಅ.31ರವರೆಗೆ ವಿಸ್ತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಗೃಹ ಕಚೇರಿ ಕೃಷ್ಣದಲ್ಲಿ ಭಾನುವಾರ ನಡೆದ ಸಭೆಯ ಬಳಿಕ ಕನ್ನಡ ಮತ್ತು ಸಂಸ್ಕೃತಿ ಹಾಗು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವ ಶಿವರಾಜ್ ಎಸ್.ತಂಗಡಗಿ ಅವರು ಮಾತನಾಡಿ, ಸಮೀಕ್ಷೆ ವಿಸ್ತರಣೆ ಮಾಡಿದರೂ ಶಿಕ್ಷಕರನ್ನು ಬಳಕೆ ಮಾಡಿ ಕೊಳ್ಳದಿರಲು ತೀರ್ಮಾನಿಸಲಾಗಿದೆ. ಹೀಗಾಗಿ, ಶಾಲೆಗಳು ಎಂದಿನಂತೆ ನಡೆಯಲಿವೆ. ಸಮೀಕ್ಷೆಗಾಗಿ ದಸರಾ ರಜೆ ವಿಸ್ತರಣೆ ಮಾಡಿಲ್ಲ. ಮುಖ್ಯಮಂತ್ರಿ ನಿರ್ದೇಶನದಂತೆ ದೀಪಾವಳಿ ಹಬ್ಬದ ಹಿನ್ನಲೆ ಅ.20, 21 ಹಾಗು 22 ರಂದು ಸಮೀಕ್ಷೆಯಲ್ಲಿ ಪಾಲ್ಗೊ ಳ್ಳುವ ಸಿಬ್ಬಂದಿಗೆ ರಜೆ ನೀಡಲಾಗಿದೆ. ಅ.23 ಮೂರರಿಂದ ಸಮೀಕ್ಷೆ ಪುನಃ ಪ್ರಾರಂಭವಾಗಲಿದೆ. ಆಯಾ ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿನ ವಿವಿಧ ಇಲಾಖೆಯ ಸಿಬ್ಬಂದಿ ಬಳಸಿ ಅ.23 ರಿಂದ 31 ರವರೆಗೆ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಲಿದ್ದಾರೆ ಎಂದು ತಿಳಿಸಿದರು.

**ರಾಜ್ಯಾದ್ಯಂತ 95 ರಷ್ಟು ಸಮೀಕ್ಷೆ**

ಬೆಂಗಳೂರು ಹೊರತುಪಡಿಸಿ ರಾಜ್ಯಾದ್ಯಂತ ಶೇ.95ರಷ್ಟು ಸಮೀಕ್ಷೆ ಕಾರ್ಯ ಪೂರ್ಣಗೊಂಡಿದ್ದು, ರಾಮನಗರ ಶೇ.86,, ಧಾರವಾಡ ಶೇ.88 ಹಾಗು ಬೀದರ್ ಜಿಲ್ಲೆಗಳಲ್ಲಿ ಶೇ.79.46 ರಷ್ಟು ಸಮೀಕ್ಷೆ ಕಾರ್ಯ ತುಸು ಕುಂಠಿತವಾಗಿದೆ. ಬೆಂಗಳೂರಿನಲ್ಲಿ ಶೇ.45ರಷ್ಟು ಸಮೀಕ್ಷೆ ಕಾರ್ಯ ನಡೆದಿದೆ. ಬೆಂಗಳೂರಿನಲ್ಲಿ ತಡವಾಗಿ ಸಮೀಕ್ಷೆ ಪ್ರಾರಂಭವಾದ ಕಾರಣ ಸಮೀಕ್ಷೆ ಕಡಿಮೆಯಾಗಿದೆ. ಕೆಲ ಜಿಲ್ಲೆಗಳಲ್ಲಿ ನೂರರಷ್ಟು ಸಮೀಕ್ಷೆ ಪೂರ್ಣಗೊಂಡಿದೆ. ಬಾಕಿ ಉಳಿದಿರುವ ಜಿಲ್ಲೆಗಳಲ್ಲಿ ಮಾತ್ರ ಸಮೀಕ್ಷೆ ಅ.31ರವರೆಗೆ ನಡೆಯಲಿದ್ದು, ಕೆಲ ಜಿಲ್ಲೆಗಳಲ್ಲಿ ಈ ಕಾರ್ಯ ಶೀಘ್ರವೇ ಪೂರ್ಣಗೊಳ್ಳಬಹುದು ಎಂದರು.

## ಆರ್‌ಎಸ್‌ಎಸ್ ಪಥ ಸಂಚಲನ: ಮತ್ತೊಮ್ಮೆ ಅರ್ಜಿ ಸಲ್ಲಿಕೆಗೆ ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಆಯೋಜಿಸಿದ್ದ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಅನುಮತಿ ನಿರಾಕರಿಸಿದ ತಹಶೀಲ್ದಾರ್ ಕ್ರಮ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆ ನಡೆಸಿದ ಹೈಕೋರ್ಟ್‌ನ ಕಲಬುರಗಿ ಪೀಠವು ಯಾವ ದಿನ ಪಥಸಂಚಲನ ನಡೆ ಸುತ್ತೀರಿ ಎಂದು ತೀರ್ಮಾನಿಸಿ ಹೊಸದಾಗಿ ಅರ್ಜಿ ಸಲ್ಲಿಸುವಂತೆ ಆರ್‌ಎಸ್‌ಎಸ್ ಪರ ಅರ್ಜಿದಾರರಿಗೆ ಸೂಚಿಸಿದೆ.

ಆರ್‌ಎಸ್‌ಎಸ್ ಪಥಸಂಚಲನ ನಿಗದಿಯಾದ ಭಾನುವಾರವೇ ತನಗೂ ಭೀಮ ಪಥಸಂಚಲನ ನಡೆಸಲು ಅನುಮತಿ ನೀಡುವಂತೆ ದಲಿತಪರ ಸಂಘಟನೆ ಭೀಮ್ ಆರ್ಜಿ ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸಿತ್ತು.

ಒಂದೇ ದಿನ ಏಕಕಾಲಕ್ಕೆ ಎರಡು ಸಂಘಟನೆಗಳು ಕಾರ್ಯಕ್ರಮ ಆಯೋಜಿಸುವುದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಲಿದೆಯೆಂಬ ಪೊಲೀಸ್ ವರದಿ ಆಧರಿಸಿ ತಹಶೀಲ್ದಾರ್ ನಾಗಯ್ಯ ಹಿರೇಮಠ ಅವರು ಪಥಸಂಚಲನ ನಡೆಸಲು ಎರಡೂ ಸಂಘಟನೆಗಳಿಗೆ ಅನುಮತಿ ನಿರಾಕರಿಸಿದ್ದರು. ಅದನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಜಿಲ್ಲಾ ಸಂಚಾಲಕ ಅಶೋಕ ಪಾಟೀಲ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ತುರ್ತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರಿದ್ದ ನ್ಯಾಯಪೀಠವು, ಸದ್ಯ ಆರ್‌ಎಸ್‌ಎಸ್ ನ.2ರಂದು ಪಥಸಂಚಲನ ಆಯೋಜಿಸಲು ನಿಗದಿಪಡಿಸಲಾಗಿದೆ. ಅದಕ್ಕೆ ಅನುಮತಿ ನೀಡಲು ರೂಟ್ ಮ್ಯಾಪ್ ಹಾಗು ತಹಶೀಲ್ದಾರ್ ಕೇಳಿದ್ದ ವಿವರಣೆಗಳೊಂದಿಗೆ ಹೊಸದಾಗಿ ಅರ್ಜಿದಾರರು ಅರ್ಜಿ ಸಲ್ಲಿಸಬೇಕು. ಅದನ್ನು ಕಲಬುರಗಿ ಜಿಲ್ಲಾಧಿಕಾರಿ ಪರಿಗಣಿಸಬೇಕು. ಈ ಕುರಿತ ವರದಿಯನ್ನು ಅ.24ರ ಮಧ್ಯಾಹ್ನ 2.30ಕ್ಕೆ ಸಲ್ಲಿಸಬೇಕು ಎಂದು ಸೂಚಿಸಿ ವಿಚಾರಣೆಯನ್ನು ಅ.24ಕ್ಕೆ ಮುಂದೂಡಿತು. ಸರ್ಕಾರದ ಪರವಾಗಿ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಅರ್ಜಿದಾರರ ಪರ ಅರುಣ್ ಶ್ಯಾಮ್ ಹಾಜರಿದ್ದರು.

## ರಾಜೀವ್ ತಾಂತ್ರಿಕ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನ

• ಪ್ರಜೋದಯ ವರದಿ




**ಹಾಸನ:** ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯವು 2025-26ನೇ ಸಾಲಿನಿಂದ ಸ್ವಾಯತ್ತ ಸ್ಥಾನಮಾನ ಪಡೆದಿದೆ.

ಈ ಮೊದಲೇ ಕಾಲೇಜು ವಿಶ್ವ ವಿದ್ಯಾಲಯ ಅನುದಾನ ಆಯೋಗದಿಂದ (ಯುಜಿಸಿ) ಅನು ಮೋದನೆ ಪಡೆದಿತ್ತು. ನಗರದ ಹೆಸರಾಂತ ಮಕ್ಕಳ ತಜ್ಞ ದಿ||ಡಾ.ವಿ.ರಾಜೀವ್ ಅವರ ಶ್ರಮದ ಫಲವಾಗಿ ರಾಜೀವ್ ಶಿಕ್ಷಣ ಸಂಸ್ಥೆ ಅಡಿಯಲ್ಲಿ 2008ರಲ್ಲಿ 4 ವಿಭಾಗಗಳೊಂದಿಗೆ ಪ್ರಾರಂಭವಾದ ತಾಂತ್ರಿಕ ಕಾಲೇಜು ಪ್ರಸ್ತುತ 9 ಪದವಿ ವಿಭಾಗ, 1 ಸ್ನಾತಕೋತ್ತರ ಪದವಿ ವಿಭಾಗ ಹಾಗು 5 ಸಂಶೋಧನಾ ವಿಭಾಗಗಳೊಂದಿಗೆ 2050ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

2024ರಲ್ಲಿ ಈ ಸಂಸ್ಥೆಯು ಎನ್‌ಬಿಎ ಮಾನ್ಯತೆ ಪಡೆಯುವುದರೊಂದಿಗೆ ಅದೇ ವರ್ಷ ಎ ಶ್ರೇಣಿಯೊಂದಿಗೆ ನ್ಯಾಕ್ ಮಾನ್ಯತೆ ಸಹ ಪಡೆದಿದೆ. ಸ್ವಾಯತ್ತ ಸ್ಥಾನಮಾನ ಪಡೆಯುವುದರಿಂದ ಕಾಲೇಜಿಗೆ ಉದ್ಯಮ ಆಧಾರಿತ ಪಠ್ಯಕ್ರಮ ವಿನ್ಯಾಸಗೊಳಿಸುವ ಅವಕಾಶ ಹೊಂದುವುದರ ಜೊತೆಗೆ ತನ್ನದೇ ಯಾದ ಪರೀಕ್ಷೆ ನಡೆಸುವ, ಪ್ರಶ್ನೆ ಪತ್ರಿಕೆಗಳನ್ನು ಹೊಂದಿಸುವ ಮತ್ತು ಆಂತರಿಕವಾಗಿ ಪ್ರವೇಶ ಪ್ರಕ್ರಿಯೆ ನಿರ್ವಹಿಸುವ ಅಧಿಕಾರವಿರುತ್ತದೆ. ಸಂಸ್ಥೆಯು ಕೈಗಾರಿಕೆಗಳೊಂದಿಗೆ ನೇರ ಸಹಯೋಗ ಸ್ಥಾಪಿಸಲು ಸಾಧ್ಯವಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಟ್ಟದಲ್ಲಿ ಉದ್ಯೋಗಾವಕಾಶ ದೊರೆಯುತ್ತವೆ. ಸ್ವಾಯತ್ತ ಸ್ಥಾನಮಾನ ಪಡೆದುದಕ್ಕಾಗಿ ರಾಜೀವ್ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ. ರಚನಾ ರಾಜೀವ್, ಉಪಾಧ್ಯಕ್ಷ ಡಾ. ರಂಜಿತ್ ರಾಜೀವ್, ಕಾರ್ಯದರ್ಶಿ ಡಾ.ಬಿ.ಎನ್. ರತ್ನ ಅವರು ಕಾಲೇಜಿನ ಆಡಳಿತ ಮಂಡಳಿಯವರು ಹರ್ಷ ವ್ಯಕ್ತಪಡಿಸುವುದರ ಜೊತೆಗೆ ಈ ಸ್ಥಾನಮಾನ ಪಡೆಯಲು ಶ್ರಮಿಸಿದ ಕಾಲೇಜಿನ ಪ್ರಾಂಶುಪಾಲ ಡಾ.ಪಿ.ಕೆ. ಮಹೇಶ್, ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು ಬೋಧಕ ಹಾಗು ಬೋಧಕೇತರ ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019